
# “ಮಾರ್ಚ್ 29, 1914 ರ ಯುಗ ಪ್ರವರ್ತಕ ಘಟನೆಯನ್ನು ಕುರಿತು ವಿಶೇಷ ಸಂಚಿಕೆ”



ಅಖಿಲ ಭಾರತ ಪತ್ರಿಕೆ

ಮಾರ್ಚ್ – 2013



*"O worshipper of the formless Infinite, reject not form, what lives in form is He."*

- Sri Aurobindo

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

**"ಮಾರ್ಚ್ 29, 1914 ರ ಯುಗ ಪ್ರವರ್ತಕ ಘಟನೆಯನ್ನು ಕುರಿತು ವಿಶೇಷ ಸಂಚಿಕೆ"**

(ಮನುಷ್ಯನ ಕ್ರಿಯಾಶೀಲ ಆಧ್ಯಾತ್ಮಿಕ ಸಂಸ್ಕೃತಿಯ ಹೊಸಯುಗದ ಪ್ರಾರಂಭ)


**ಅನು : ಶ್ರೀ ಪುರುಷೋತ್ತಮ ಗಲಗಲಿ**

ಶ್ರೀಮಾತೆ ಎಂದು ಮತ್ತು ಹೇಗೆ ಶ್ರೀ ಅರವಿಂದರನ್ನು ಭೇಟಿ ಮಾಡಿದರು 3

**ಅನು : ಡಾ. ಕೆ.ಎಸ್. ಆಮೂರ**

29–03–1914 ರಂದು ಆದ ಭೇಟಿ ಮತ್ತು ಅದರ ಪ್ರಾಮುಖ್ಯತೆ 4

ಶ್ರೀಮಾತೆಯವರ ದಿನಚರಿಯಲ್ಲಿಯ ದಾಖಲೆಗಳು 9

ಸ್ವರ್ಗವನ್ನು ನಮ್ಮ ಅಧೀನದಲ್ಲಿಟ್ಟುಕೊಂಡಿದ್ದೇವೆ, ಆದರೆ ಪೃಥ್ವಿಯನ್ನಲ್ಲ 15

**ಅನು : ಶ್ರೀ ವೀರೇಂದ್ರ ಸಿಂಪಿ**

ಇಬ್ಬರಲ್ಲಿರುವ ಒಂದೇ ಪ್ರಜ್ಞೆ 22

**ಅನು : ಡಾ. ಕೆ.ಎಸ್. ಆಮೂರ**

ಶ್ರೀ ಅರವಿಂದರ ಹಾಗೂ ಶ್ರೀಮಾತೆಯವ ಬೋಧನೆ 24

ಅತಿಮಾನಸದ ಪ್ರಕಟಣೆ 28

ಮಾರ್ಚ್ 19, 1914 ರ ಯುಗ ಪ್ರವರ್ತಕ ಘಟನೆಯ ಶತಾಬ್ದಿಯನ್ನು ಆಚರಿಸುವುದು ಹೇಗೆ? 31

**ಅನುಬಂಧ**

ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಒಟ್ಟಿಗೆ ಕುಳಿತು ನೀಡಿದ ಕೊನೆಯ ದರ್ಶನ 34
(ಅಮಲ ಕಿರಣ [ಕೆ.ಡಿ. ಸೇಟ್ನಾ] 'ಮದರ ಇಂಡಿಯಾ' ಮಾಸಪತ್ರಿಕೆಯ ನವ್ಹೆಂಬರ 1951ರ ಸಂಚಿಕೆಯಲ್ಲಿ ಬರೆದಿದ್ದ ಸಂಪಾದಕೀಯ)


**"ಅವರಿಲ್ಲದೆ (ಶ್ರೀ ಅರವಿಂದರಿಲ್ಲದೆ) ನಾನು ಅಸ್ತಿತ್ವದಲ್ಲಿರುವುದಿಲ್ಲ, ನನ್ನ ಹೊರತಾಗಿ ಅವರು ಪ್ರಕಟಗೊಳ್ಳುವುದಿಲ್ಲ."**

– ಶ್ರೀಮಾತೆ


**ವಾರ್ತಾಪತ್ರ** 38


---

# "ಮಾರ್ಚ್ 29, 1914 ರ ಯುಗ ಪ್ರವರ್ತಕ ಘಟನೆಯನ್ನು ಕುರಿತು ವಿಶೇಷ ಸಂಚಿಕೆ"

## ಶ್ರೀಮಾತೆ ಎಂದು ಮತ್ತು ಹೇಗೆ ಶ್ರೀ ಅರವಿಂದರನ್ನು ಭೇಟಿ ಮಾಡಿದರು?

ಪೃಥ್ವಿಯ ಮೇಲೆ ನೆರವೇರಿಸಬೇಕಾಗಿದ್ದ ಮಣಿಹ (mission) ಕುರಿತು ನಾನು ಎಂದು ಮತ್ತು ಹೇಗೆ ಅರಿವುಳ್ಳವಳಾದೆ? ಎಂದು ಮತ್ತು ಹೇಗೆ ನಾನು ಶ್ರೀ ಅರವಿಂದರನ್ನು ಭೇಟಿ ಮಾಡಿದೆ?

ನೀವು ಈ ಎರಡು ಪ್ರಶ್ನೆಗಳನ್ನು ಕೇಳಿದ್ದೀರಿ ಮತ್ತು ನಾನು ಅವುಗಳಿಗೆ ಸಂಕ್ಷಿಪ್ತ ಉತ್ತರ ಕೊಡುವೆನೆಂದು ವಚನವಿತ್ತಿದ್ದೆ.

ನನ್ನ ಮಣಿಹ ಕುರಿತು ಹೇಳುವುದಾದರೆ, ಅದು ಎಂದು ನನ್ನ ಅರಿವಿಗೆ ಬಂದಿತು ಎಂದು ಹೇಳುವುದು ಕಠಿಣ, ನಾನು ಅದರೊಂದಿಗೆ ಜನಿಸಿಬಂದ ಹಾಗಿತ್ತು. ಮನಸ್ಸು, ಮಿದುಳು ಬೆಳೆಯುತ್ತಿದ್ದಂತೆ ಈ ಪ್ರಜ್ಞೆಯ ನಿಖರತೆ ಮತ್ತು ಸಂಪೂರ್ಣತೆ ಕೂಡ ಬೆಳೆದವು.

ನನ್ನ 11 ಮತ್ತು 13ನೆಯ ವಯಸ್ಸಿನ ಮಧ್ಯೆ ಚೈತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಅನುಭವಗಳ ಒಂದು ಸರಣಿ ನನಗೆ ಭಗವಂತನ ಅಸ್ತಿತ್ವವನ್ನು ತೆರೆದು ತೋರಿಸಿತಷ್ಟೇ ಅಲ್ಲ, ಆದರೆ ಮನುಷ್ಯ ಪ್ರಜ್ಞೆಯಲ್ಲಿ ಹಾಗೂ ಕ್ರಿಯೆಯಲ್ಲಿ ಅವನೊಂದಿಗೆ ಏಕತೆ ಪಡೆಯುವ, ಅವನನ್ನು ಸಮಗ್ರವಾಗಿ ಸಿದ್ಧಿಸಿಕೊಳ್ಳುವ ಮತ್ತು ಪೃಥ್ವಿಯ ಮೇಲೆ ದೈವೀ ಜೀವನವೊಂದರಲ್ಲಿ ಆವನನ್ನು ಪ್ರಕಟಿಸುವ ಸಾಧ್ಯತೆಯನ್ನು ತೆರೆದು ತೋರಿಸಿತು. ಇದನ್ನು ಮತ್ತು ಅದರ ನೆರವೇರಿಕೆಗಾಗಿ ವ್ಯಾವಹಾರಿಕ ಶಿಸ್ತುಪಾಲನೆಯೊಂದನ್ನು ಹಲವಾರು ಬೋಧಕರು ನನಗೆ ನನ್ನ ದೇಹ ನಿದ್ರಿಸುತ್ತಿದ್ದಾಗ ನೀಡಿದರು, ಅವರಲ್ಲಿ ಕೆಲವರನ್ನು ನಂತರ, ಭೌತಿಕ ಸ್ತರದ ಮೇಲೆ ಭೇಟಿ ಮಾಡಿದೆ.

ನಂತರ ಆಂತರಿಕ ಹಾಗೂ ಬಾಹ್ಯ ಅಭಿವೃದ್ಧಿ ಮುಂದುವರಿಯುತ್ತಿದ್ದಂತೆ ಈ ಬೋಧಕರಲ್ಲಿ ಒಬ್ಬರೊಂದಿಗೆ ಆಧ್ಯಾತ್ಮಿಕ ಹಾಗೂ ಚೈತ್ಯಾತ್ಮಿಕ ಸಂಬಂಧ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗತೊಡಗಿತು ಮತ್ತು ಮೇಲಿಂದ ಮೇಲೆ ಬರತೊಡಗಿತು. ಆ ಸಮಯದಲ್ಲಿ ನಾನು ಭಾರತೀಯ ತತ್ತ್ವಜ್ಞಾನಗಳು ಹಾಗೂ ಧರ್ಮಗಳು ಇವುಗಳ ಬಗ್ಗೆ ತಿಳಿದುಕೊಂಡದ್ದು ಅತ್ಯಲ್ಪವಾಗಿತ್ತು. ಆದಾಗ್ಯೂ ಆ ಒಬ್ಬರನ್ನು ಶ್ರೀಕೃಷ್ಣ ಎಂದು ಕರೆಯುವಂತೆ ನನ್ನಲ್ಲಿ ಪ್ರೇರಣೆ ಉಂಟಾಯಿತು. ಮತ್ತು ಆಗಿನಿಂದ ನಾನು ಅವರೊಂದಿಗೆ (ಒಂದು ದಿನ ನಾನು ಅವರನ್ನು ಪೃಥ್ವಿಯ ಮೇಲೆ ಭೇಟಿ ಮಾಡುವವಳಿದ್ದೇನೆ ಎಂಬುದನ್ನು ಅರಿತುಕೊಂಡಿದ್ದೆ) ದೈವೀ ಕಾರ್ಯವನ್ನು ಕೈಕೊಳ್ಳುವುದಿದೆ ಎಂಬುದರ ಅರಿವು ಪಡೆದೆ.



1910ರಲ್ಲಿ ನನ್ನ ಪತಿಯೊಬ್ಬರೇ ಪಾಂಡೀಚೇರಿಗೆ ಬಂದಿದ್ದರು ಮತ್ತು ವಿಶಿಷ್ಟ ಪರಿಸ್ಥಿತಿಗಳಡಿಯಲ್ಲಿ ಶ್ರೀ ಅರವಿಂದರ ಪರಿಚಯ ಮಾಡಿಕೊಂಡಿದ್ದರು. ಆಗಿನಿಂದ ನಾವಿಬ್ಬರೂ ಭಾರತಕ್ಕೆ ಮರಳಿ ಬರಬೇಕೆಂಬ ಬಲವತ್ತರವಾದ ಇಚ್ಛೆಯನ್ನಿರಿಸಿ ಕೊಂಡಿದ್ದೆವು – ಭಾರತ ನನ್ನ ನಿಜವಾದ ಮಾತೃಭೂಮಿ ಎಂಬ ಅನಿಸಿಕೆಯನ್ನು ನಾನು ಯಾವಾಗಲೂ ಹೃದಯದಲ್ಲಿಟ್ಟುಕೊಂಡಿದ್ದೆ.

**(13/38–39)** – ಶ್ರೀಮಾತೆ

(ಪಾಂಡಿಚೇರಿ, 1920)

*

ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿದ್ದಾಗ ಶ್ರೀಮಾತೆಯವರು ಸ್ಮರಣೆಗೆ ತಂದುಕೊಂಡ ವಿಷಯಗಳು.

ನೆನಪುಗಳನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ:

ಶ್ರೀ ಅರವಿಂದರನ್ನು ಭೇಟಿ ಮಾಡಲೆಂದು ನಾನು ಭಾರತಕ್ಕೆ ಬಂದೆ. ಶ್ರೀ ಅರವಿಂದರ ಸಾನ್ನಿಧ್ಯದಲ್ಲಿರಲು ನಾನಿಲ್ಲಿಯೇ ಉಳಿದುಕೊಂಡೆ. ಅವರು ದೇಹತ್ಯಾಗ ಮಾಡಿದ ನಂತರವೂ ಅವರ ಕಾರ್ಯವನ್ನು ಕೈಕೊಳ್ಳುವುದಕ್ಕಾಗಿ ನಾನು ಇಲ್ಲಿರುವುದನ್ನು ಮುಂದುವರಿಸಿದೆ, ಅವರ ಕಾರ್ಯ ಸತ್ಯಕ್ಕೆ ಸೇವೆ ಸಲ್ಲಿಸುವುದರ ಮೂಲಕ, ಮಾನವತೆಯಲ್ಲಿ ಜ್ಞಾನೋದಯವನ್ನುಂಟು ಮಾಡುವುದರ ಮೂಲಕ ಪೃಥ್ವಿಯ ಮೇಲೆ ದೈವೀ ಜೀವನ ಬರುವುದನ್ನು ತ್ವರಿತಗೊಳಿಸುವುದಾಗಿತ್ತು.

**(3/45)** – ಶ್ರೀಮಾತೆ

(21–2–1968)

*

## 29–3–1914 ರಂದು ಆದ ಭೇಟಿ ಮತ್ತು ಅದರ ಪ್ರಾಮುಖ್ಯತೆ

### "ಹೊಸ ದೈವೀ ಕಾಲ ವಿಕಾಸಗೊಳ್ಳುವ ಗಳಿಗೆಯೊಂದು ಪ್ರಾರಂಭಗೊಂಡಿತು"

1913ರ ಕೊನೆಯ ದಿನಗಳಲ್ಲಿ ಪಾಲ್ ರಿಚರ್ಡ ಫ್ರೆಂಚ್ ಇಂಡಿಯಾದಲ್ಲಿದ್ದ ಸೆನೇಟಿನ ಒಂದು ಸ್ಥಾನಕ್ಕಾಗಿ ಹಾಗೂ ಪ್ಯಾರಿಸ್‌ನಲ್ಲಿಯ ಚೇಂಬರ ಆಫ್ ಡೆಪ್ಯೂಟೀಜನ್ನು ಪ್ರತಿನಿಧಿಸುವುದಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದರು.

ಆ ನಿಮಿತ್ತದಿಂದಾಗಿ ಮಿರ್ರಾ (ಶ್ರೀಮಾತೆ) ಮತ್ತು ಪಾಲ್ ರಿಚರ್ಡ ಮಾರ್ಚ 5, 1914ರಂದು ಪ್ಯಾರೀಸ್‌ನಿಂದ ಫ್ರೆಂಚ್ ಇಂಡಿಯಾದತ್ತ ಪ್ರಯಾಣ ಕೈಕೊಂಡರು. ಜಿನೇವಾದಿಂದ ಜಪಾನೀಯರ 'ಕಾಗಾ ಮಾರು' ಹಡಗಿನಲ್ಲಿ ತಮ್ಮ ಪ್ರಯಾಣವನ್ನು ಮುಂದುವರಿಸಿ ಕೋಲಂಬೋದಲ್ಲಿ ಬಂದಿಳಿದರು. ನಂತರ ತಲೈಮುನ್ನಾರದಿಂದ ಇಕ್ಕಟ್ಟಾದ ಜಲ ವಿಭಾಗವನ್ನು ದಾಟಿಕೊಂಡು ಧನುಷ್ಕೋಟಿಗೆ ಬಂದಿಳಿದರು ಮತ್ತು ಅಲ್ಲಿಂದ ರೈಲುಗಾಡಿಯಲ್ಲಿ ಪ್ರವಾಸಮಾಡಿ ಪಾಂಡೀಚೇರಿಯನ್ನು 29–3–1914ರಂದು ತಲುಪಿದರು. ಅದೇ ದಿನ ಮಧ್ಯಾಹ್ನ 3.30 ಗಂಟೆಗೆ 41 ರ್ಯು ಫ್ರಾನ್ಸೋಯಿಸ್ ಮಾರ್ಟಿನ[1]ದಲ್ಲಿ ವಾಸಿಸುತ್ತಿದ್ದ ಶ್ರೀ ಅರವಿಂದರನ್ನು ಭೇಟಿ ಮಾಡಿದರು. ಅವರನ್ನು ಅಟ್ಟದ ಮೆಟ್ಟಿಲುಗಳ ಹತ್ತಿರ ಬರಮಾಡಿಕೊಳ್ಳಲಾಯಿತು ಮತ್ತು ಅಟ್ಟದ ಮೇಲಿನ ವರಾಂಡಾದ ವರೆಗೆ ಕರೆದೊಯ್ಯಲಾಯಿತು. ಅಲ್ಲಿ ಪರಸ್ಪರ ಔಪಚಾರಿಕ ಪರಿಚಯವಾದ ನಂತರ ಅವರು ಶ್ರೀ ಅರವಿಂದರ ಎದುರಿಗೆ ಕುಳಿತುಕೊಂಡರು. ಮಿರ್ರಾ (ಶ್ರೀಮಾತೆ) ತತ್ಕ್ಷಣ ತಮಗೆ ಕನಸಿನಲ್ಲಿ ರಹಸ್ಯ ವಿದ್ಯೆಯನ್ನು ಬೋಧಿಸುತ್ತಿದ್ದ ಗುರು ಶ್ರೀಕೃಷ್ಣನನ್ನು ಶ್ರೀ ಅರವಿಂದರಲ್ಲಿ ಗುರುತಿಸಿದರು.

*

ಅನಿಶ್ಚಿತ ಅವನಿಯ ಮೇಲೆ ಯಾರನು ಅವಳ ಹೃದಯ
ಅರಸುತ್ತ ಇಷ್ಟು ದೂರದವರೆಗೆ ಸಾಗಿ ಬಂದಿಹುದೋ ಅವನ
ಮೊದಲ ಸಲದ ಭೇಟಿ ಇಲ್ಲಿ ಅವಳಿಗಾಗಿಹುದು.
ಎರಡು ಜೀವಿಗಳ ಮಧ್ಯೆ ಕವಿದಿದ್ದ ಮಂಜು ಕರಗಿಹುದು
ತಾರೆಯೊಂದು ಸ್ವರ್ಗದಲಿ ಇನ್ನೊಂದನು ಆಕರ್ಷಿಸುವ ತೆರದಿ
ಪರದೆಯ ಸರಿಸಿಟ್ಟಿಹುದು ಅವಳ ಹೃದಯ, ಅವನದು ಅವಳತ್ತ ತಿರುಗಿಹುದು
ಅಚ್ಚರಿಯಿಂದ ಒಬ್ಬರನೊಬ್ಬರು ನೋಡಿಹರು, ಸಂತಸ ಪಟ್ಟಿಹರು
ಮತ್ತು ಮೌನದಲಿ ನೆಟ್ಟನೋಟದಿಂದ ಸಾಮ್ಯತೆಯ ಸೃಷ್ಟಿಸಿಹರು
ಶಾಶ್ವತತೆಯ ಕಿರಣವಾಗಿದ್ದ ಕ್ಷಣವೊಂದು ಕಳೆದು ಹೋಗಿಹುದು
ಹೊಸ ದೈವೀಕಾಲ ವಿಕಾಸಗೊಳ್ಳುವ ಗಳಿಗೆ ಪ್ರಾರಂಭಗೊಂಡಿಹುದು.

"ಸಾವಿತ್ರಿ" **pp.** 393, 399 – ಶ್ರೀ ಅರವಿಂದರು

*

1. ಆಶ್ರಮದ ಕ್ರೀಡಾಂಗಣದ ವಾಯುವ್ಯ ಭಾಗ. (Rue Francois Martin)



"ಶ್ರೀ ಅರವಿಂದೋ ಅವರ ಅನನ್ಯ ಜೀವನ" ಎಂಬ ಗ್ರಂಥ[1]ದಲ್ಲಿ ರಿಷಭಚಂದ ಹೇಳಿದ್ದು ಹೀಗಿದೆ:

"ನಮ್ಮ ಗುರುವಿನೊಂದಿಗೆ ಆದ ಶ್ರೀಮಾತೆಯವರ ಭೇಟಿ ಅಪರಿಮಿತ ಪ್ರಾಮುಖ್ಯತೆಯುಳ್ಳದ್ದಾಗಿತ್ತು. ಅದೊಂದು ಯುಗ ಪ್ರವರ್ತಕ ಘಟನೆ. ಮಾನವನ ಆಧ್ಯಾತ್ಮಿಕ ಸಂಸ್ಕೃತಿಯಲ್ಲಿ ಒಂದು ಹೆಗ್ಗುರುತು. ಅದು ಕ್ರಿಯಾತ್ಮಕ ಆಧ್ಯಾತ್ಮಿಕತೆಯ ಹೊಸ ಯುಗವನ್ನು ಪ್ರಾರಂಭಿಸಿತು. ಇತಿಹಾಸಕ್ಕಾಗಲಿ, ಮಾನವತೆಗಾಗಲಿ ಅಪರಿಚಿತವಾಗಿದ್ದ ಚಲನೆಯೊಂದಕ್ಕೆ ಜನ್ಮ ನೀಡಿತು. ತೊಂದರೆಗೊಳಗಾದ ಮನುಷ್ಯನ ಮನಸ್ಸಿನ ಮಂದ ಬೆಳಕಿನಿಂದ ಅವನನ್ನು ಅತಿಮಾನಸ ಪ್ರಕಾಶದ ಶಕ್ತಿಯಲ್ಲಿ ಎತ್ತಿ ಹಿಡಿಯುವ ಅನಂತ ಭವ್ಯತೆಯುಳ್ಳ ಮಣಿಹದಲ್ಲಿ ದಣಿವರಿಯದ ಸಹಕಾರದತ್ತ ಅದು ಕೊಂಡೊಯ್ಯಿತು. ವೈರಾಗ್ಯ ತಾಳಿ ಕ್ರಿಯೆಯಿಂದ ಹಿಂದೆಗೆಯುವ ಅತಿ ಹಳೆಯ ಕಾಲದ ಪ್ರವೃತ್ತಿಯ ರೂಢಿಗತ ಮುಖವಾಡವನ್ನು ಕಿತ್ತೊಗೆಯಲಾಯಿತು, ಸಮಗ್ರ ಆಧ್ಯಾತ್ಮಿಕತೆಯ ಪ್ರಕಾಶಕ್ಕೆ ತೆರೆದುಕೊಳ್ಳುವಂತಾಯಿತು, ಹಳೆಯ ಪ್ರವೃತ್ತಿಯನ್ನು ಗತಕಾಲದ ಅಧೋ ಲೋಕದಲ್ಲಿ ಎಸೆಯಲಾಯಿತು. ಜೀವನವನ್ನು ದೃಢೀಕರಿಸಲಾಯಿತು ಮತ್ತು ಅದನ್ನು ದೈವೀ ಪ್ರಕಟಣೆಯ ಕ್ಷೇತ್ರವೆಂದು ಒಪ್ಪಿಕೊಳ್ಳಲಾಯಿತು. ಭದ್ರವಾಗಿ ತಳವೂರಿದ್ದ ಅವಿದ್ಯೆಯ ಹಾಗೂ ಅಚೇತನದ ಸಾಮರ್ಥ್ಯಗಳೊಂದಿಗೆ ಭಯಾನಕ ಕೈಕೈ ಕಾಳಗದ ನಿರ್ಧಾರಕ ಜೀವನಯಾತ್ರೆ ಪ್ರಾರಂಭವಾಯಿತು. ಪೃಥ್ವಿಯ ಮೇಲಿನ ಜೀವನವನ್ನು ಆದಿಕಾಲದಿಂದ ದುಃಖಕ್ಕೀಡು ಮಾಡಿದ ಅಂಧಕಾರ, ವೇದನೆ ಹಾಗೂ ಮೃತ್ಯುಗಳ ಚಕ್ರಾಧಿಪತ್ಯವನ್ನು ತಳ್ಳಿಹಾಕುವುದಕ್ಕಾಗಿ ಅತಿಮಾನಸ ಪ್ರಕಾಶದ ಶಕ್ತಿಯನ್ನು ಕೆಳಗಿಳಿಸಿ ತರಲಾಯಿತು ಮತ್ತು ಭವಿಷ್ಯವನ್ನು ರೂಪಿಸಲು, ಮನುಕುಲದ ದೈವೀ ಅದೃಷ್ಟವನ್ನು ಸಿದ್ಧಿಸಿಕೊಳ್ಳಲು ಅದನ್ನು ಚಾಲನೆಗೊಳಪಡಿಸಲಾಯಿತು. ಸ್ವರ್ಗವನ್ನು ಸ್ವೀಕರಿಸಲು ಪೃಥ್ವಿಯನ್ನು ಸಿದ್ಧಗೊಳಿಸಲಾಯಿತು. ಭೌತದ್ರವ್ಯವನ್ನು ಅಪ್ಪಿಕೊಳ್ಳಲು ದಿವ್ಯಾತ್ಮ ಕೆಳಗಿಳಿದು ಬಂದಿತು."

ಅವರು ಇನ್ನೂ ಮುಂದುವರಿದು ಹೇಳಿದ್ದು ಹೀಗಿದೆ:

ಅದು ಎರಡು ಪ್ರವಾದಿ–ಆತ್ಮಗಳ ಭೇಟಿಯಾಗಿತ್ತು. ಅವರು ಭಗವಂತ ಕಳಿಸಿಕೊಟ್ಟ ಅಗ್ರಗಾಮಿಗಳು, ಅವರ ಪ್ರಜ್ಞೆಗಳು ಒಂದುಗೂಡಿದ್ದವು. ಆ ಒಂದುಗೂಡುವಿಕೆ ಉತ್ಕ್ರಾಂತಿಗಾಗಿ, ಸಮಗ್ರ ಯೋಗದ ಪರಿಪೂರ್ಣತೆಗಾಗಿ ಮತ್ತು ಪೃಥ್ವಿಯ ಮೇಲಿನ

1. 1981 ಆವೃತ್ತಿ. ಪು. 378

ರೂಪ ಪರಿವರ್ತನೆ ಮತ್ತು ದೈವೀ ಜೀವನಗಳತ್ತ ಕೊಂಡೊಯ್ಯುವ, ಎಲ್ಲವನ್ನು ಒಳಗೊಳ್ಳುವ ಆಧ್ಯಾತ್ಮಿಕತೆಯನ್ನು ಪ್ರಾರಂಭಿಸುವುದಕ್ಕಾಗಿ ಇತ್ತು. ಪ್ರಜ್ಞೆಯಲ್ಲಾದ ಈ ಏಕತೆಯಿಂದ ಶ್ರೀಮಾತೆಯವರು ಒಮ್ಮೆ ಹೇಳಿದ್ದು ಹೀಗಿದೆ: "ಅವರಿಲ್ಲದೆ (ಶ್ರೀ ಅರವಿಂದರಿಲ್ಲದೆ) ನನ್ನ ಅಸ್ತಿತ್ವವಿಲ್ಲ, ನಾನಿಲ್ಲದೆ ಅವರು ಪ್ರಕಟವಾಗಲಾರರು." ಆಧುನಿಕ ಯುಗದ ಉತ್ಕ್ರಾಂತಿಯ ಸತ್ವ ಪರೀಕ್ಷೆಯ ಕಾಲದಲ್ಲಿ, ಸ್ಪಷ್ಟವಾದ ಹಾಗೂ ಅಸಂದಿಗ್ಧವಾದ ಈ ಹೇಳಿಕೆ ಅವರ ದ್ವಂದ್ವ ಪಾತ್ರದಿಂದ ನಡೆಸಬೇಕಾದ ಲೀಲೆಯನ್ನು ನಿಷ್ಕರ್ಷಿಸಿತು.

*

ಅಮಲ ಕಿರಣ (ಕೆ.ಡಿ. ಸೇಟ್ನಾ) ಅವರು ಶಬ್ದಗಳಲ್ಲಿ ವ್ಯಕ್ತಪಡಿಸಿದ್ದು:

"ಶ್ರೀ ಅರವಿಂದರನ್ನು ಭೇಟಿ ಮಾಡುವುದಕ್ಕಿಂತ ಮೊದಲು ಶ್ರೀಮಾತೆಯವರಲ್ಲಿ ಜಗತ್ತಿನ ಉದ್ಧಾರಕ್ಕಾಗಿ ಕಲಾತ್ಮಕ, ಸಾಮಾಜಿಕ ಹಾಗೂ ಧಾರ್ಮಿಕವಾದ ಎಲ್ಲ ಬಗೆಯ ಸಾಮರ್ಥ್ಯಪೂರ್ಣ ವಿಚಾರಗಳಿದ್ದವು. ಶ್ರೀ ಅರವಿಂದರ ದರ್ಶನವಾದ ಕೂಡಲೆ ತಮ್ಮ ಎಲ್ಲ ಬಗೆಯ ಮಾನಸಿಕ ವಿಚಾರಗಳು ನಿಂತು ಹೋಗಲೆಂದು ಅಭೀಪ್ಸೆಪಟ್ಟರು. ಅವರು ಒಂದು ಮಾತನ್ನೂ ಆಡಲಿಲ್ಲ. ಶ್ರೀ ಅರವಿಂದರೂ ಕೂಡ ಒಂದೂ ಮಾತನ್ನಾಡಲಿಲ್ಲ. ಶ್ರೀಮಾತೆಯವರು ಕೇವಲ ಶ್ರೀ ಅರವಿಂದರ ಪಾದಗಳಡಿಯಲ್ಲಿ ಕುಳಿತುಕೊಂಡಿದ್ದರು, ಮನಸ್ಸನ್ನು ಅವರಿಗೆ ತೆರೆದಿರಿಸಿಕೊಂಡಿದ್ದರು. ಕೆಲ ಸಮಯದ ನಂತರ ಮೇಲಿನಿಂದ ಅನಂತ ಶಾಂತಿ ಕೆಳಗಿಳಿದು ಬಂದು ಅವರ ಮನಸ್ಸಿನಲ್ಲಿ ನೆಲೆಗೊಂಡಿತು. ಅವರ ಈ ಎಲ್ಲ ಶ್ರೇಷ್ಠ ವಿಚಾರಗಳಲ್ಲಿ ಪ್ರತಿಯೊಂದೂ ಮಾಯವಾಯಿತು ಮತ್ತು ಅಲ್ಲಿ ಕೇವಲ ಮನಸ್ಸಿನಾಚೆಯ ಬರಿದಾದ, ಕ್ಷೋಭೆರಹಿತ ನಿರೀಕ್ಷಣೆ ಇದ್ದಿತು."

(Mother India, Feb. 1938)

ಅವರಿಬ್ಬರು ಪರಸ್ಪರರನ್ನು ಭೇಟಿ ಮಾಡಿದ್ದು, ಅವರಿಂದ ಹೊಸ ಯುಗ ಜನ್ಮತಾಳುವುದಕ್ಕೆ ಅವಶ್ಯವಾದ ಸೃಜನಾತ್ಮಕ ಸಾಮರ್ಥ್ಯಗಳು ಒಟ್ಟಿಗೆ ಬರುವುದನ್ನು ಪ್ರತಿನಿಧಿಸುತ್ತದೆ. ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು, ಸಾರಭೂತವಾಗಿ, ದಿವ್ಯಾತ್ಮ (Spirit) ಮತ್ತು ಭೌತದ್ರವ್ಯ ಇವುಗಳನ್ನು ಒಟ್ಟಿಗೆ ತರಲು ಒಂದೇ ಬಗೆಯ ಆಂತರಿಕ ಜೀವನವನ್ನು ಬೆಂಬತ್ತಿದ್ದರೆಂಬುದು ಗಮನಾರ್ಹವಾದದ್ದು. ಹಾಗಾಗಿ ಅವರ ಶಕ್ತಿಗಳು ಒಂದುಗೂಡಿದ್ದು ಅತ್ಯಂತ ಸ್ವಾಭಾವಿಕವಾಗಿತ್ತು. ಅದು ಕೇವಲ ಶಕ್ತಿಗಳನ್ನು ದ್ವಿಗುಣಗೊಳಿಸುವುದಷ್ಟೇ ಆಗಿರಲಿಲ್ಲ ಆದರೆ ಪೂರಕವಾದವುಗಳನ್ನು



ಒಟ್ಟಿಗೆ ಸೇರಿಸುವುದಾಗಿತ್ತು. ಶ್ರೀ ಅರವಿಂದರ ಪ್ರಜ್ಞೆಯ ಮುಖ್ಯ ಚಲನೆ ಮನಸ್ಸಿನ ಮೇಲ್ಗಡೆಗಿರುವ ದೈವೀ ಜ್ಞಾನ–ಸಾಮರ್ಥ್ಯದ್ದಾಗಿತ್ತೆಂದೂ, ಆದಾಗ್ಯೂ ಸಮಗ್ರ ಆಧ್ಯಾತ್ಮಿಕತೆಗೆ ಅವಶ್ಯವಾದದ್ದೆಲ್ಲ ಅವರಲ್ಲಿ ಇತ್ತೆಂದೂ ಹೇಳಬಹುದು. ಶ್ರೀಮಾತೆಯವರ ಪ್ರಮುಖ ಚಲನೆ, ಹೃದಯದ ಹಿಂದಿರುವ ಗಾಢವಾದ ದೈವೀ ಪ್ರೇಮದ್ದಾಗಿತ್ತೆಂದೂ, ಆದಾಗ್ಯೂ ಸರ್ವತೋಮುಖವಾದ ಯೋಗಕ್ಕೆ ಅವಶ್ಯವಾದದ್ದೆಲ್ಲ ಸಿದ್ಧಗೊಂಡ ಉಪಸಾಮಗ್ರಿಯ ರೂಪದಲ್ಲಿತ್ತೆಂದೂ ಹೇಳಬಹುದು. ಶ್ರೀಮಾತೆಯವರು ಶ್ರೀ ಅರವಿಂದರನ್ನು ಭೇಟಿ ಮಾಡಿದಾಗ ಒಬ್ಬರನ್ನೊಬ್ಬರು ಪೂರ್ಣಗೊಳಿಸಿದರು, ಅವರಿಬ್ಬರಲ್ಲಿಯೂ ಇದ್ದ ಚೈತನ್ಯಗಳು ಲೀಲೆಯಲ್ಲಿ ತೊಡಗುವಂತೆ ಮಾಡಿದರು ಮತ್ತು ಪೃಥ್ವಿಯ ಪರಿವರ್ತನೆಯನ್ನು ಮೇಲ್ಗಡೆಯಿಂದ ಹಾಗೂ ಆಳಾತಿ ಆಳದಿಂದ ಪ್ರಾರಂಭಿಸಿದರು."

(Mother India, Feb. 1973)

*

ನೋಲಿನಿದಾ (ನಲಿನೀಕಾಂತ ಗುಪ್ತ) ಸ್ಮರಣೆಗೆ ತಂದುಕೊಂಡದ್ದರಲ್ಲಿ ಹೇಳಿದ್ದು ಹೀಗಿದೆ:

ಶ್ರೀಮಾತೆಯವರ ಗುಣ ಲಕ್ಷಣಗಳನ್ನು ಕುರಿತು ಮೊದಲಸಲ ಶ್ರೀ ಅರವಿಂದರು ವರ್ಣನೆ ಮಾಡಿದಾಗ ಅವರಲ್ಲಿ ಕಂಡುಬಂದ ಅಷ್ಟೊಂದು ಪರಿಪೂರ್ಣವಾದ, ಏನನ್ನೂ ಕಾದಿರಿಸಿಟ್ಟುಕೊಂಡಿರದ ಸಮರ್ಪಣದಂತಹದನ್ನು ತಾವು ಹಿಂದೆಂದೂ ಕಂಡಿರಲಿಲ್ಲ ಎಂದು ಹೇಳಿದ್ದರು. ಕೇವಲ ಮಹಿಳೆಯರು ಮಾತ್ರ ಅಷ್ಟೊಂದು ಇಡಿಯಾಗಿ ಮತ್ತು ಅಷ್ಟೊಂದು ಸಾರ್ವಭೌಮ ನಿರಾತಂಕದಿಂದ ತಮ್ಮನ್ನು ಕೊಟ್ಟುಕೊಳ್ಳಬಲ್ಲರು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದರು. ಇದರರ್ಥ ಗತಕಾಲದಲ್ಲಾದುದನ್ನು ಸಂಪೂರ್ಣವಾಗಿ ಅಳಿಸಿಹಾಕುವುದು ಮತ್ತು ಅದರೊಂದಿಗೆ ಸದ್ಗುಣಗಳು, ದೋಷಗಳು, ಇವುಗಳನ್ನೆಲ್ಲ ಅಳಿಸಿಹಾಕುವುದಾಗಿತ್ತು. ಅವರು ಇಲ್ಲಿಗೆ ಬಂದಾಗ ಶ್ರೀ ಅರವಿಂದರು ತಮ್ಮ ಪ್ರಭು ಎಂದು ಭಾವಿಸಿ ಅವರಿಗೆ, ತಮ್ಮ ಎಲ್ಲ ಆಧ್ಯಾತ್ಮಿಕ ಸಿದ್ಧಿಗಳನ್ನು, ತಮ್ಮ ಪ್ರಜ್ಞೆಯ ಎಲ್ಲ ಸಮೃದ್ಧಿಯನ್ನು, ಗತಕಾಲವನ್ನು ಅಳಿಸಿಹಾಕಿ ನಂತರ, ಮಗುವಿನ ಸರಳತೆಯಿಂದ ತಮ್ಮನ್ನು ಕೊಟ್ಟುಕೊಂಡಿದ್ದರು. ಹೊಸದಾಗಿ ಜನ್ಮತಾಳಿದ ಶಿಶುವಿನ ಹಾಗೆ ತಮ್ಮ ಅಧೀನದಲ್ಲಿ ಏನೂ ಇಲ್ಲವೆಂದು ಮತ್ತು ಪ್ರತಿಯೊಂದನ್ನು ಪ್ರಾರಂಭದಿಂದ ಕಲಿಯಬೇಕಾಗಿದೆ ಎಂಬ ಭಾವನೆ ತಂದುಕೊಂಡರು.

*

## ಶ್ರೀಮಾತೆಯವರ ದಿನಚರಿಯಲ್ಲಿಯ ದಾಖಲೆಗಳು

### (ಶ್ರೀ ಅರವಿಂದರನ್ನು ಭೇಟಿ ಮಾಡಿದ ನಂತರ ದಾಖಲಿಸಿದ್ದು)

ಮಾರ್ಚ 30, 1914

(ಭಗವಂತ) ಸಮಗ್ರವಾಗಿ ನಿನ್ನ ಅನುಚರ (servitor) ರಾದವರ, ನಿನ್ನ ಸಾನ್ನಿಧ್ಯದ ಪರಿಪೂರ್ಣ ಪ್ರಜ್ಞೆಯನ್ನು ಸಿದ್ಧಿಸಿಕೊಂಡವರ ಸಮ್ಮುಖದಲ್ಲಿ ನಾನಿನ್ನೂ ಬಹಳ ದೂರ, ನಾನು ಏನನ್ನು ಸಿದ್ಧಿಸಿಕೊಳ್ಳಬೇಕೆಂದು ಹಂಬಲಿಸುತ್ತಿದ್ದೇನೆಯೋ ಅದರಿಂದ ಬಹಳ ದೂರ ಇರುವೆ ಎಂಬುದರ ಅರಿವನ್ನು ತಂದುಕೊಳ್ಳುತ್ತೇನೆ, ನಾನು ಕಲ್ಪಿಸಿ ಕೊಳ್ಳಬಹುದಾದ ಅತ್ಯುಚ್ಚವಾದದ್ದು, ಅತ್ಯುದಾರವಾದದ್ದು, ಅತಿ ಪರಿಶುದ್ಧವಾದದ್ದು, ನಾನು ಕಲ್ಪಿಸಿಕೊಳ್ಳಬೇಕಾದುದಕ್ಕೆ ಹೋಲಿಸಿದರೆ, ಇನ್ನೂ ಅಂಧಕಾರ, ಅಜ್ಞಾನಗಳಲ್ಲಿದೆ ಎಂಬುದು ನನಗೆ ತಿಳಿದಿದೆ. ಆದರೆ ಈ ಗ್ರಹಿಕೆ ನನ್ನಲ್ಲಿ ಖಿನ್ನತೆಯನ್ನುಂಟು ಮಾಡುವುದರ ಬದಲಾಗಿ ನನ್ನ ಅಭೀಪ್ಸೆಗೆ, ಚೈತನ್ಯಕ್ಕೆ, ಎಲ್ಲ ಅಡೆತಡೆಗಳ ಮೇಲೆ ಜಯ ಸಾಧಿಸುವುದಕ್ಕೆ ಉತ್ತೇಜನವನ್ನು, ಬಲವನ್ನು ನೀಡುತ್ತದೆ. ಅದರಿಂದಾಗಿ (ಭಗವಂತ) ಕೊನೆಗೆ ನಿನ್ನ ನಿಯಮ ಹಾಗೂ ಕಾರ್ಯಗಳೊಂದಿಗೆ ನನ್ನನ್ನು ಗುರುತಿಸಿಕೊಳ್ಳುವಂತಾಗುತ್ತದೆ.

ಕ್ರಮೇಣ ಕ್ಷಿತಿಜ ಖಚಿತವಾಗುತ್ತದೆ, ಮಾರ್ಗ ಸ್ಪಷ್ಟವಾಗುತ್ತ ಹೋಗುತ್ತದೆ ಮತ್ತು ನಾವು ಹೆಚ್ಚಿನ ಶ್ರೇಷ್ಠತರ ನಿಶ್ಚಿತತೆಯತ್ತ ಸಾಗುತ್ತೇವೆ.

ಅತ್ಯಂತ ಗಾಢವಾದ ಅಜ್ಞಾನದಲ್ಲಿ ಮುಳುಗಿ ಹೋಗಿರುವ ಸತ್ತೆಗಳಿರುವುದು ಗಣನೆಗೆ ತೆಗೆದುಕೊಳ್ಳಬೇಕಾದ ವಿಷಯವಲ್ಲ. ನಾವು ನಿನ್ನೆ ನೋಡಿದ ವ್ಯಕ್ತಿ ಪೃಥ್ವಿಯ ಮೇಲಿದ್ದಾರೆ. ಅಂಧಕಾರ ಪ್ರಕಾಶವಾಗಿ ಪರಿವರ್ತನೆ ಹೊಂದುವ ಮತ್ತು ನಿನ್ನ ಆಳಿಕೆ ಪೃಥ್ವಿಯಮೇಲೆ ಸ್ಥಾಪಿತಗೊಳ್ಳುವ ಒಂದು ದಿನ ಬರುವುದನ್ನು ಅವರ ಸಾನ್ನಿಧ್ಯ ಸಿದ್ಧಪಡಿಸುತ್ತದೆ.

ಓ ಪ್ರಭು, ದೈವೀ ನಿರ್ಮಾತೃವಾದವನೆ, ನಾನಿದನ್ನು ಯೋಚಿಸಿದಾಗ ನನ್ನ ಹೃದಯ ಸಂತೋಷ ಮತ್ತು ಕೃತಜ್ಞತೆಯಿಂದ ಉಕ್ಕಿ ಹರಿಯುತ್ತದೆ, ನನ್ನ ನಿರೀಕ್ಷೆಗಳಿಗೆ ಮಿತಿಯೇ ಇಲ್ಲ.

ನನ್ನ ಆರಾಧನೆ ಶಬ್ದಗಳನ್ನು ಮೀರಿದ್ದಾಗಿದೆ, ಗೌರವಾರ್ಪಣೆ ನಿಶ್ಚಲ ನೀರವತೆಯಲ್ಲಿದೆ.



ಏಪ್ರಿಲ್ 1, 1914

ನಿನ್ನ ಅಭಯಾಶ್ರಮ (sanctuary) ದ ಹೃದಯದಲ್ಲಿಯೇ ನಾವು ಪ್ರವೇಶಿಸಿರುವೆವೆಂಬ ಮತ್ತು ನಿನ್ನ ಸಂಕಲ್ಪದ ಬಗ್ಗೆ ಅರಿವುಳ್ಳವರಾಗಿರುವೆವೆಂಬ ಭಾವನೆ ನನಗೆ ಬರುತ್ತಿದೆ. ಶ್ರೇಷ್ಠ ಸಂತೋಷ, ಆಳವಾದ ಶಾಂತಿ ನನ್ನಲ್ಲಿ ಆಳಿಕೆ ನಡೆಸಿವೆ. ಮತ್ತು ಹಾಗಿದ್ದಾಗ್ಯೂ ನನ್ನ ಎಲ್ಲ ಆಂತರಿಕ ರಚನೆಗಳು ವ್ಯರ್ಥ ಕನಸಿನ ಹಾಗೆ ಮಾಯವಾಗಿವೆ ಮತ್ತು ಇನ್ನೂ ವ್ಯಕ್ತಿವಿಶಿಷ್ಟತೆ ಹೊಂದಿರದ ಸತ್ತೆಯ ರೀತಿಯಲ್ಲಿ, ನಿನ್ನ ಅಗಾಧತೆಯ ಮುಂದೆ ಚೌಕಟ್ಟನ್ನಾಗಲಿ, ಪದ್ಧತಿಯನ್ನಾಗಲಿ ಉಳಿಸಿಕೊಳ್ಳದೆ ನಿನ್ನೆದುರು ಇರುವುದನ್ನು ಕಂಡುಕೊಳ್ಳುತ್ತಿದ್ದೇನೆ. ಎಲ್ಲ ಗತಕಾಲ, ಅದರ ಬಾಹ್ಯರೂಪದಲ್ಲಿ ಹಾಸ್ಯಾಸ್ಪದವಾದ ರೀತಿಯಲ್ಲಿ ನಿರಂಕುಶವಾಗಿತ್ತೆಂದು ತೋರಿಬರುತ್ತದೆ, ಮತ್ತು ಆದಾಗ್ಯೂ ಅದರದೇ ಕಾಲದಲ್ಲಿ ಅದು ಉಪಯುಕ್ತವಾಗಿತ್ತೆಂಬುದನ್ನು ನಾನು ತಿಳಿದಿದ್ದೇನೆ.

ಆದರೆ ಈಗ ಎಲ್ಲವೂ ಬದಲಾಗಿದೆ. ಹೊಸ ಹಂತವೊಂದು ಪ್ರಾರಂಭವಾಗಿದೆ.

*

ಏಪ್ರಿಲ್ 2, 1914

ಪ್ರತಿದಿನ ನಾನು ಬರೆದಿಡಲು ಇಚ್ಛೆಪಟ್ಟಾಗ, ನಮ್ಮೆದುರು ಈಗ ತೆರೆದುಕೊಳ್ಳುತ್ತಿರುವ ಹೊಸ ಅವಧಿ ಏಕಾಗ್ರತೆಯಲ್ಲಿರುವುದಕ್ಕಿಂತ ಹೆಚ್ಚಾಗಿ ವಿಸ್ತರಿಸಿಕೊಳ್ಳುವುದಿದೆ ಎಂಬ ಭಾವನೆ ತಂದುಕೊಡುವ ರೀತಿಯಲ್ಲಿ ಅಡೆತಡೆಯನ್ನುಂಟು ಮಾಡುತ್ತದೆ. ಆಳವಾದ, ನಿಶ್ಚಲನೀರವತೆಯಲ್ಲಿ ಚಿಂತನ ಮಾಡುತ್ತ ಇಲ್ಲವೆ ಧ್ಯಾನದಲ್ಲಿರುತ್ತ ಬರೆದಿಡುವುದನ್ನು ಮಾಡುತ್ತ ಇಲ್ಲವೆ ಮಾಡದೆ ಇರುತ್ತ ಉಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ (ಭಗವಂತ) ಪ್ರತಿಯೊಂದು ಕ್ಷಣದ ಚಟುವಟಿಕೆಯಲ್ಲಿ ನಿನಗೆ ಸೇವೆ ಸಲ್ಲಿಸಬೇಕು ಮತ್ತು ನಿನ್ನೊಡನೆ ನಮ್ಮನ್ನು ಗುರುತಿಸಿಕೊಳ್ಳಬೇಕು.

ಆದರೆ ನನ್ನ ಹೃದಯ ನಿನಗಾಗಿ ಒಂದು ಸ್ತೋತ್ರವನ್ನು ಹಾಡಿ ಹೇಳುವುದರಿಂದ ದಣಿದುಕೊಳ್ಳುವುದಿಲ್ಲ ಮತ್ತು ನನ್ನ ಯೋಚನೆ ಸತತ ನಿನ್ನಿಂದ ತುಂಬಿಕೊಂಡಿದೆ.

*

ಏಪ್ರಿಲ್ 3, 1914

ನಾನು ಹೊಸ ಜನ್ಮ ತಾಳುವುದರಲ್ಲಿದ್ದೇನೆ ಮತ್ತು ಎಲ್ಲ ವಿಧಾನಗಳು, ಗತಕಾಲದ ರೂಢಿಗಳು ಇನ್ನು ಮುಂದೆ ನಿರುಪಯುಕ್ತವಾಗುವವು ಎಂದು ನನಗೆ ತೋರಿಬರುತ್ತದೆ. ಯಾವುದನ್ನು ನಾನು ಪರಿಣಾಮಗಳೆಂದು ತಿಳಿದುಕೊಂಡಿದ್ದೆನೋ ಅದು ಒಂದು

ತಯಾರಿ ಮಾಡಿಕೊಳ್ಳುವುದಕ್ಕಿಂತ ಹೆಚ್ಚಿನದೇನೂ ಆಗಿಲ್ಲ. ನಾನು ಈ ವರೆಗೆ ಏನನ್ನೂ ಕೈಕೊಂಡಿಲ್ಲ, ಆಧ್ಯಾತ್ಮಿಕ ಜೀವನವನ್ನು ಜೀವಿಸಿಲ್ಲ, ಕೇವಲ ಅದರತ್ತ ಕರೆದೊಯ್ಯುವ ಮಾರ್ಗದಲ್ಲಿ ಪ್ರವೇಶಿಸಿದ್ದೇನೆ, ನನಗೇನೂ ತಿಳಿದಿರದ ಹಾಗಿದೆ, ಏನನ್ನಾದರೂ ರೂಪಿಸುವ ಕ್ಷಮತೆ ನನ್ನಲ್ಲಿಲ್ಲ, ಎಲ್ಲ ಅನುಭವ ಈ ನಂತರ ಪ್ರಾರಂಭವಾಗಲಿದೆ ಎಂದು ನನಗೆ ತೋರಿಬರುತ್ತದೆ. ನನ್ನ ಎಲ್ಲ ಗತಕಾಲವನ್ನು ಅದರ ದೋಷಗಳು ಹಾಗೂ ವಿಜಯಗಳೊಂದಿಗೆ ನನ್ನಿಂದ ಕಿತ್ತುಕೊಳ್ಳಲಾಗಿದೆ, ಅದೆಲ್ಲವೂ ಮಾಯವಾಗಿ ಹೊಸದಾಗಿ ಜನ್ಮ ತಾಳಿದ ಹಾಗೂ ಅದರ ಅಸ್ತಿತ್ವ ಇನ್ನು ಮುಂದೆ ಜೀವಿಸಬೇಕಾದ ಶಿಶುವಿಗೆ ಸ್ಥಾನ ಮಾಡಿಕೊಟ್ಟಿದೆ, ಅದರ ಕರ್ಮ ಯಾವುದೂ ಇಲ್ಲ, ಕಲಿತುಕೊಳ್ಳಲು ಹಿಂದಿನ ಅನುಭವವಿಲ್ಲ, ಹಾಗೆಯೇ ಸರಿಪಡಿಸಬೇಕಾದ ಯಾವ ದೋಷವೂ ಇಲ್ಲ. ನನ್ನ ತಲೆ ಎಲ್ಲ ಜ್ಞಾನವನ್ನು, ನಿಶ್ಚಿತತೆಯನ್ನು ಕಳೆದುಕೊಂಡು ಬರಿದಾಗಿದೆ, ಆದರೆ ಹಾಗೆಯೇ ಅದರಲ್ಲಿ ವ್ಯರ್ಥಯೋಚನೆ ಇಲ್ಲ. ಈ ಸ್ಥಿತಿಗೆ ಯಾವ ಪ್ರತಿರೋಧವನ್ನೂ ಒಡ್ಡದೆ ಸಮರ್ಪಣ ಹೇಗೆ ಮಾಡಬೇಕು ಎಂಬುದನ್ನು ಕಲಿತುಕೊಂಡರೆ, ತಿಳಿದುಕೊಳ್ಳಲು ಇಲ್ಲವೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸದೆ ಇದ್ದರೆ, ಅಜ್ಞಾನಿ ಹಾಗೂ ಬಿಚ್ಚುಮನಸ್ಸಿನ ಶಿಶುವಾಗಲು ನಾನು ಒಪ್ಪಿಕೊಂಡರೆ ಹೊಸ ಸಾಧ್ಯತೆಯೊಂದು ನನ್ನೆದುರಿಗೆ ತೆರೆದುಕೊಳ್ಳುವುದು. ಪೂರ್ತಿ ಖಾಲಿ ಹಾಳೆಯ ಹಾಗೆ ಆಗುವಂತೆ ನನ್ನನ್ನು ನಿರ್ಣಾಯಕವಾಗಿ ಕೊಟ್ಟುಕೊಳ್ಳಬೇಕೆಂಬುದು ನನಗೆ ತಿಳಿದಿದೆ, ಆ ಹಾಳೆಯ ಮೇಲೆ, ಓ ಪ್ರಭು, ನಿನ್ನ ಯೋಚನೆ, ಸಂಕಲ್ಪ ಮುಕ್ತವಾಗಿ, ವಿರೂಪಗೊಳ್ಳುವ ಯಾವ ಅಪಾಯವೂ ಇಲ್ಲದೆ ದಾಖಲಿಸುವಂತಾಗಲಿ.

ನನ್ನ ಹೃದಯದಿಂದ ಅಗಾಧವಾದ ಕೃತಜ್ಞತೆ ಮೇಲೆದ್ದು ಬರುತ್ತಿದೆ, ನಾನು ಅಷ್ಟೊಂದು ಅರಸುತ್ತಿದ್ದ ಹೊಸ್ತಿಲನ್ನು ಕೊನೆಗೆ ತಲುಪಿದ ಭಾವನೆ ಬರುತ್ತಿದೆ.

ಓ ಪ್ರಭು, ನಾನು ಸಾಕಷ್ಟು ಪರಿಶುದ್ಧಳು, ಅವೈಯಕ್ತಿಕಳು, ನಿನ್ನ ದೈವೀ ಪ್ರೇಮದಿಂದ ಚೈತನ್ಯವನ್ನು ತುಂಬಿಕೊಂಡವಳು ಆಗುವಂತೆ ಅನುಗ್ರಹಿಸು, ಅದರಿಂದಾಗಿ ನಾನು ನಿರ್ಣಾಯಕವಾಗಿ ಆ ಹೊಸ್ತಿಲನ್ನು ದಾಟಿ ಹೋಗಲು ಶಕ್ತಳಾಗುತ್ತೇನೆ.

ಓ, ಯಾವ ಅಂಧಕಾರವಿಲ್ಲದೆ, ಯಾವ ನಿರ್ಬಂಧವೂ ಇಲ್ಲದೆ ನಿನಗೆ ಸೇರಿದವಳಾಗುವುದು!

*

ಏಪ್ರಿಲ್ 4, 1914

ಓ ಪ್ರಭು, ನನ್ನ ಆರಾಧನೆ ನಿನ್ನತ್ತ ಉತ್ಸಾಹದಿಂದ ಮೇಲಕ್ಕೆದ್ದು ಬರುತ್ತದೆ, ನನ್ನ ಇಡೀ ಸತ್ತೆ ಒಂದು ಅಭೀಪ್ಸೆಯಾಗಿದೆ, ನಿನಗೆ ಮುಡಿಪಾಗಿರಿಸಿರುವ ಜ್ವಾಲೆಯಾಗಿದೆ.



ಪ್ರಭು, ನನ್ನ ಮಧುರ ಗುರುವೆ, ನನ್ನಲ್ಲಿ ವಾಸಿಸುವವನು, ಸಂಕಲ್ಪಿಸುವವನು ನೀನೇ ಆಗಿರುವಿ.

ಈ ದೇಹ ನಿನ್ನ ಉಪಕರಣ, ಈ ಸಂಕಲ್ಪ ನಿನ್ನ ಸೇವಕ, ಈ ಬುದ್ಧಿಮತ್ತೆ ನಿನ್ನ ಸಲಕರಣೆ ಮತ್ತು ಇಡೀ ಸತ್ತೆ ನೀನೇ ಆಗಿರುವಿ.

*

ಏಪ್ರಿಲ್ 7, 1914

ನಾನು ಬಲವಿರುವ, ಇಡಿಯಾಗಿ ಧೈರ್ಯದಿಂದ ಇರುವ, ಚೈತನ್ಯವಿರುವ, ಶೌರ್ಯವಿರುವ, ಸ್ಥಿರ ಪಟ್ಟುಹಿಡಿಯುವಿಕೆ ಇರುವ ಸತ್ತೆಯಾಗುವುದೆಂದು? ನನ್ನದೇ ವ್ಯಕ್ತಿವಿಶಿಷ್ಟತೆ ಪ್ರಕಟಿಸಬೇಕಾದ ಶಕ್ತಿಗಳಿಂದ ಎರಕಗೊಂಡ ಉಪಕರಣ ಮಾತ್ರವಾಗಲಿ ಎನ್ನುವಷ್ಟರ ಮಟ್ಟಿಗೆ ಅದನ್ನು ಸಾಕಷ್ಟು ಸಂಪೂರ್ಣವಾಗಿ ಮರೆತು ಬಿಡಲು ಎಂದು ಸಾಧ್ಯವಾಗುವುದು? ಏಕತೆಯ ಬಗೆಗಿನ ನನ್ನ ಪ್ರಜ್ಞೆ ಎಂದು ಯಾವುದೇ ಬಗೆಯ ಜಡತೆಯ ಛಾಯೆಯನ್ನು ಹೊಂದದಂತಾಗುವುದು, ದೈವೀ ಪ್ರೇಮದ ಬಗೆಗಿನ ನನ್ನ ಭಾವನೆ ಎಂದು ಯಾವುದೇ ಬಗೆಯ ದೌರ್ಬಲ್ಯದ ಮಿಶ್ರಣವಿಲ್ಲದಂತಾಗುವುದು?

ಓ ಪ್ರಭು, ಎಲ್ಲ ಯೋಚನೆ ನನ್ನಲ್ಲಿ ಅಂತ್ಯಗೊಂಡಂತೆ ತೋರಿಬರುತ್ತದೆ, ಈಗ ನಾನು ಈ ಪ್ರಶ್ನೆಗಳನ್ನು ಕೇಳಿರುವುದರಿಂದ, ನನ್ನ ಪ್ರಜ್ಞಾಪೂರ್ಣ ಮನಸ್ಸನ್ನು ಅರಸುತ್ತಿರುವೆ ಮತ್ತು ಅದನ್ನು ನಾನು ಕಂಡುಕೊಳ್ಳುತ್ತಿಲ್ಲ, ನನ್ನ ವ್ಯಕ್ತಿವಿಶಿಷ್ಟತೆಯನ್ನು ಅರಸುತ್ತಿದ್ದೇನೆ ಅದನ್ನು ನಾನೆಲ್ಲಿಯೂ ಶೋಧಿಸಲಾಗಿಲ್ಲ, ನನ್ನ ವೈಯಕ್ತಿಕ ಸಂಕಲ್ಪವನ್ನು ಅರಸಿದಾಗ ಅದು ಅಲ್ಲಿ ಕಂಡುಬರುತ್ತಿಲ್ಲ. (ಭಗವಂತ) ನಾನು ನಿನ್ನನ್ನು ಅರಸುತ್ತೇನೆ, ಮತ್ತು ನೀನು ನಿಶ್ಚಲನೀರವತೆಯಲ್ಲಿರುವಿ..... ಕೇವಲ ನಿಶ್ಚಲನೀರವತೆ.....

ಈಗ ನಿನ್ನ ಧ್ವನಿ ಕೇಳಿಬರುತ್ತಿದ್ದಂತೆ ಭಾಸವಾಗುತ್ತಿದೆ. ನಿನ್ನ ಧ್ವನಿ: "ಸಮಗ್ರವಾಗಿ ಅಂತ್ಯಗೊಳ್ಳುವುದು ಹೇಗೆ ಎಂಬುದನ್ನು ನೀನು ಎಂದಿಗೂ ತಿಳಿದುಕೊಂಡಿಲ್ಲ. ಯಾವಾಗಲೂ ನಿನ್ನಲ್ಲಿ ಏನೋ ಒಂದು ತಿಳಿದುಕೊಳ್ಳಲು, ಸಾಕ್ಷಿಯಾಗಲು, ಅರ್ಥಮಾಡಿಕೊಳ್ಳಲು ಬಯಸುತ್ತಿತ್ತು. ಸಂಪೂರ್ಣವಾಗಿ ಶರಣಾಗತಳಾಗು, ಮಾಯವಾಗುವುದು ಹೇಗೆ ಎಂಬುದನ್ನು ಕಲಿತುಕೋ, ನಿನ್ನನ್ನು ನನ್ನಿಂದ ಪ್ರತ್ಯೇಕಗೊಳಿಸುವ ಕೊನೆಯ ತಡೆಗಟ್ಟನ್ನು ಮುರಿದುಹಾಕು, ಏನನ್ನೂ ಕಾದಿರಿಸಿಕೊಳ್ಳದೆ ಶರಣಾಗತಿಗಾಗಿರುವ ನಿನ್ನ ಕಾರ್ಯವನ್ನು ಸಿದ್ಧಿಸಿಕೋ." ಅಯ್ಯೋ, ಓ ಪ್ರಭು, ಬಹಳಷ್ಟು ಕಾಲದಿಂದ ನಾನದನ್ನು ಬಯಸುತ್ತಿದ್ದೇನೆ, ಆದರೆ ಅದನ್ನು ನನಗೆ ದೊರಕಿಸಲಾಗಿಲ್ಲ. ಈಗ ನನಗೆ ಹಾಗೆ ಮಾಡಲು ಆ ಸಾಮರ್ಥ್ಯವನ್ನು ಕೊಡುವಿಯಲ್ಲವೆ?

ಓ ಪ್ರಭು, ನನ್ನ ಸನಾತನ, ಮಧುರ ಗುರುವೆ, ನನ್ನನ್ನು ಬೇಗುದಿಯಿಂದ ತುಂಬಿಬಿಡುವ ಈ ಪ್ರತಿರೋಧವನ್ನು ಭಂಗಗೊಳಿಸು.... ನನ್ನಿಂದಲೇ ನನ್ನನ್ನು ಮುಕ್ತಗೊಳಿಸು.

*

ಏಪ್ರಿಲ್ 10, 1914

ಒಮ್ಮೆಗೆ ಪರದೆ ಹರಿದು ಹೋಯಿತು, ಕ್ಷಿತಿಜ ತೆರೆದುಕೊಂಡಿತು ಮತ್ತು ಸ್ಪಷ್ಟ ದರ್ಶನದೆದುರಿಗೆ ನನ್ನ ಇಡೀ ಸತ್ತೆ ನಿನ್ನ ಅಡಿದಾವರೆಗಳಲ್ಲಿ, ರಭಸದ ಪ್ರವಾಹದಂತಿರುವ ಕೃತಜ್ಞತೆಯೊಂದಿಗೆ, ಬಿದ್ದುಕೊಂಡಿತು. ಹಾಗಿದ್ದಾಗ್ಯೂ ಈ ಆಳವಾದ, ಸಮಗ್ರವಾದ ಸಂತೋಷವಿದ್ದಾಗ್ಯೂ ಸನಾತನನ ಶಾಂತಿಯೊಂದಿಗೆ ಎಲ್ಲವೂ ಶಾಂತಿಯುತವಾಗಿತ್ತು.

ನನಗೆ ಯಾವ ಮಿತಿಗಳೂ ಇರುವಂತೆ ತೋರಿಬರುತ್ತಿಲ್ಲ, ಈ ನಂತರ ನನ್ನ ದೇಹದ ಬಗ್ಗೆ ಗ್ರಹಿಕೆ ಇರುವುದಿಲ್ಲ, ಸಂವೇದನೆಗಳಿಲ್ಲ, ಭಾವನೆಗಳಿಲ್ಲ, ಯೋಚನೆಗಳಿಲ್ಲ – ಒಳನುಗ್ಗಿ ಬಂದ ಪ್ರೇಮ ಹಾಗೂ ಪ್ರಕಾಶ ಇವುಗಳ ಸ್ಪಷ್ಟ, ಪರಿಶುದ್ಧ ಹಾಗೂ ಪ್ರಶಾಂತ ಗಾಢತೆ, ಮಾತಿಗೆ ನಿಲುಕಲಾರದ ದಿವ್ಯಾನಂದ ತುಂಬಿಕೊಂಡಿರುವಿಕೆ ಇದೇ ಅಲ್ಲಿರುವುದು, ಅದು ಮಾತ್ರ ಈಗ ನಾನೆಂದು ತೋರಿಬರುತ್ತದೆ. ಮೊದಲಿದ್ದ ಸ್ವಾರ್ಥಿ ಹಾಗೂ ಸೀಮಿತ ನಾನು ಎಂಬುದು ಈ ಹೊಸ ನಾನು ಎಂಬುದರ ಅತಿ ಕಡಿಮೆ ಭಾಗ, ಓ ಪ್ರಭು, ನಮ್ಮ ಅದೃಷ್ಟಗಳ ಯಜಮಾನನೆ, ಈ ಹೊಸದನ್ನು ಕುರಿತು ಅದು ನಾನೋ ಅಥವಾ ನೀನೋ ಎಂದು ಹೇಳಲು ನನಗೆ ಸಾಧ್ಯವಾಗುವುದಿಲ್ಲ.

ಎಲ್ಲವೂ ಚೈತನ್ಯ, ಧೈರ್ಯ, ಶಕ್ತಿ, ಸಂಕಲ್ಪ, ಅನಂತ ಮಾಧುರ್ಯ, ಹೋಲಿಸಲಾಗದ ಕರುಣೆ ಇದ್ದ ಹಾಗಿದೆ.

ಕಳೆದ ಕೆಲ ದಿನಗಳಲ್ಲಿ ಆದದ್ದಕ್ಕಿಂತಲೂ ಹೆಚ್ಚು ಶಕ್ತಿಯುತವಾಗಿ ಗತಕಾಲ ಮೃತವಾಗಿದೆ ಮತ್ತು ಅದನ್ನು ಹೊಸ ಜೀವನದ ಕಿರಣಗಳಡಿಯಲ್ಲಿ ಹೂತಿಟ್ಟಹಾಗಿದೆ. ಈ ಪುಸ್ತಕದ ಕೆಲವು ಪುಟಗಳನ್ನು ಓದುತ್ತಿದ್ದಂತೆ, ಹಿಂದಿನದತ್ತ ನಾನು ಬೀರಿದ ಕ್ಷಣಿಕ ನೋಟ ಈ ಮೃತ್ಯುವಿನ ಬಗ್ಗೆ ನಿಶ್ಚಿತವೆನಿಸುವ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟಿತು ಮತ್ತು ಓ ನನ್ನ ದೈವೀ ಗುರುವೆ, ನನ್ನನ್ನೇ ನಿನ್ನೆದುರು ಎಲ್ಲ ಸರಳತೆಯಿಂದ, ನಗ್ನ ಮಗುವಿನ ಹಾಗೆ ಮುಂದಿರಿಸುತ್ತಿದ್ದ ದೊಡ್ಡ ಭಾರ ಹಗುರಾಗುವಂತೆ ಮಾಡಿತು. ..... ಮತ್ತು ಇನ್ನೂ ನಾನು ಗ್ರಹಿಸುತ್ತಿರುವ ಏಕೈಕ ವಿಷಯ ಆ ಸ್ಥಿರ ಹಾಗೂ ಪರಿಶುದ್ಧ ಗಾಢತೆಯಾಗಿದೆ.

ಪ್ರಭು, ನನ್ನ ಪ್ರಾರ್ಥನೆಗೆ ಉತ್ತರ ನೀಡಿರುವಿ, ನಾನು ನಿನ್ನಿಂದ ಬಯಸಿದ್ದನ್ನು ಅನುಗ್ರಹಿಸಿರುವಿ. 'ನಾನು' ಎಂಬುದು ಮಾಯವಾಗಿದೆ, ಅಲ್ಲಿ ಕೇವಲ ನಿನ್ನ ಸೇವೆಗಾಗಿ



ಇರಿಸಿದ, ತಿದ್ದಬಹುದಾದ ಉಪಕರಣವಿದೆ, ನಿನ್ನ ಅನಂತ ಹಾಗೂ ಸನಾತನ ಕಿರಣಗಳು ಏಕಾಗ್ರಗೊಳ್ಳುವುದಕ್ಕೆ ಹಾಗೂ ಪ್ರಕಟವಾಗುವುದಕ್ಕೆ ಒಂದು ಕೇಂದ್ರವಿದೆ, ನನ್ನ ಜೀವನವನ್ನು ನೀನು ಕೈಗೆತ್ತಿಕೊಂಡು ನಿನ್ನದನ್ನಾಗಿ ಮಾಡಿರುವಿ, ನನ್ನ ಸಂಕಲ್ಪವನ್ನು ನಿನ್ನದರೊಡನೆ ಏಕವಾಗಿಸಿರುವಿ, ನನ್ನ ಪ್ರೇಮವನ್ನು ನಿನ್ನದರೊಡನೆ ಗುರುತಿಸಿಕೊಂಡಿರುವಿ, ನನ್ನ ಯೋಚನೆಯ ಸ್ಥಾನದಲ್ಲಿ ಪರಿಪೂರ್ಣ ಪ್ರಜ್ಞೆಯನ್ನಿರಿಸಿರುವಿ.

ಆಶ್ಚರ್ಯಪಡುತ್ತ ಮೌನ ಹಾಗೂ ಶರಣಾಗತವಾಗುವ ಆರಾಧನೆಯೊಂದಿಗೆ ನನ್ನ ದೇಹ ಧೂಳಿನಲ್ಲಿ ಬಾಗಿ ತನ್ನ ಹಣೆಯನ್ನು ನೆಲಕ್ಕೆ ಮುಟ್ಟಿಸುತ್ತಿದೆ.

ನಿನ್ನ ವೈಭವಯುತ, ಬದಲಾಗದ ಶಾಂತಿಯಲ್ಲಿ ನೀನು ಮಾತ್ರವಲ್ಲದೆ ಬೇರೇನೂ ಅಸ್ತಿತ್ವದಲ್ಲಿರಲಾರದು.

*

ಕಾರಿಕಲ್, ಏಪ್ರಿಲ್ 13, 1914

ರೂಢಿಗತ ಜೀವಿಯಾಗಿ ಉಳಿದುಕೊಳ್ಳುವುದರಿಂದ ನನ್ನನ್ನು ತಡೆಯಲು ಪ್ರತಿಯೊಂದು ಒಟ್ಟಿನಲ್ಲಿ ಕಾರ್ಯಮಾಡುತ್ತದೆ ಮತ್ತು ಈ ಹೊಸ ಸ್ಥಿತಿಯಲ್ಲಿ, ಇಷ್ಟೊಂದು ಸಂಕೀರ್ಣ ಹಾಗೂ ಅಸ್ಥಿರವಾದ ಪರಿಸ್ಥಿತಿಗಳ ಮಧ್ಯದಲ್ಲಿ ಈ ಮೊದಲು ನಿನ್ನ ಬದಲಾಗದ ಶಾಂತಿಯನ್ನು ಇಷ್ಟೊಂದು ಸಂಪೂರ್ಣವಾಗಿ ನಾನು ಎಂದಿಗೂ ಜೀವಿಸಿಲ್ಲ, ಇಲ್ಲವೆ ಅದಕ್ಕೂ ಹೆಚ್ಚಾಗಿ, ಇದಕ್ಕೂ ಮೊದಲು, ನಿನ್ನ ದೈವೀ ಶಾಂತಿ ಮಾತ್ರ ಅಲ್ಲಿ ಜೀವಿಸಿರುವಂತೆ ಮಾಡಲು ನಾನು ಎಂಬುದು ಇಷ್ಟೊಂದು ಪರಿಪೂರ್ಣವಾಗಿ ಮಾಯವಾಗಿರಲಿಲ್ಲ. ಎಲ್ಲವೂ ಸುಂದರವಾಗಿದೆ, ಸಾಮರಸ್ಯದಿಂದಿದೆ ಮತ್ತು ಸ್ಥಿರವಾಗಿದೆ ಮತ್ತು ಎಲ್ಲವೂ ನಿನ್ನಿಂದ ತುಂಬಿಕೊಂಡಿದೆ. ಸೌಮ್ಯವಾಗಿ ಬೀಸುತ್ತಿರುವ ಮೆಲುಗಾಳಿಯಲ್ಲಿ ನಿನ್ನ ಬಗ್ಗೆ ಭಾವನೆ ಬರುತ್ತಿದೆ, ನೀನು ಎಲ್ಲರ ಹೃದಯಗಳಲ್ಲಿ ಪ್ರಕಟಗೊಳ್ಳುವಿ, ಮತ್ತು ಎಲ್ಲ ಸತ್ತೆಗಳಲ್ಲಿ ಜೀವಿಸುವಿ. ನಿನ್ನನ್ನು ಕುರಿತು ಮಾತನಾಡದ ಒಂದು ಪಶುವೂ ಇಲ್ಲ, ಒಂದು ಸತ್ಯವೂ ಇಲ್ಲ ಮತ್ತು ನಾನು ನೋಡುವ ಪ್ರತಿಯೊಂದರ ಮೇಲೆ ನಿನ್ನ ಹೆಸರನ್ನು ಬರೆದಿಡಲಾಗಿದೆ.

ಓ ನನ್ನ ಮಧುರ ಪ್ರಭುವೆ, ನಾನು ನಿನಗೆ ಇಡಿಯಾಗಿ ಸೇರಿದವಳಾಗಿರುವಂತೆ ಮತ್ತು ನನ್ನ ಪ್ರಜ್ಞೆ ಸುನಿಶ್ಚಿತವಾಗಿ ನಿನ್ನದರೊಡನೆ ಏಕವಾಗಿರುವಂತೆ ಅನುಗ್ರಹ ಮಾಡಿರುವಿಯಲ್ಲವೆ? ಇಂತಹ ವೈಭವಯುತ ಸಂತೋಷ ಪಡೆಯುವುದಕ್ಕೆ ಯೋಗ್ಯಳಾಗಲು ನಾನು ಮಾಡಿದ್ದಾದರೂ ಏನು? ಅದನ್ನು ಬಯಸಿದುದಲ್ಲದೆ, ಸತತ ಬೇಕೆಂದು ಕೇಳಿದುದಲ್ಲದೆ ಬೇರೇನನ್ನೂ ಮಾಡಿಲ್ಲ – ಅದು ಅತ್ಯಲ್ಪವಾದದ್ದು.

ಆದರೆ, ಓ ಪ್ರಭುವೆ, ಅದು ಈಗ ನಿನ್ನ ಸಂಕಲ್ಪ, ನನ್ನದಲ್ಲವಾದುದರಿಂದ, ನೀನು ಈ ಸಂತೋಷ ಎಲ್ಲರಿಗೂ ಲಾಭದಾಯಕವಾಗುವಂತೆ ಮಾಡುವಿ. ಮತ್ತು ಅದರ ಕೇವಲ ಉದ್ದೇಶ ಸಾಧ್ಯವಿದ್ದಷ್ಟು ಹೆಚ್ಚಿನ ಸಂಖ್ಯೆಯಲ್ಲಿರುವ ಸತ್ತೆಗಳು ನಿನ್ನನ್ನು ಗ್ರಹಿಸುವಂತೆ ಮಾಡುವುದಾಗಿದೆ.

ಓ, ಎಲ್ಲರೂ ನಿನ್ನನ್ನು ಅರಿತುಕೊಳ್ಳುವಂತಾಗಲಿ, ಪ್ರೀತಿಸುವಂತಾಗಲಿ, ನಿನ್ನ ಸೇವೆ ಕೈಕೊಳ್ಳುವಂತಾಗಲಿ, ಎಲ್ಲರೂ ಪರಮೋಚ್ಚ ಮುಡಿಪಾಗಿರಿಸುವಿಕೆಯನ್ನು ಸ್ವೀಕರಿಸುವಂತಾಗಲಿ.

ಓ, ದೈವೀ ಪ್ರೇಮವೆ, ಜಗತ್ತಿನಲ್ಲೆಲ್ಲ ಹರಡಿಕೋ, ಜೀವನವನ್ನು ಪುನರುಜ್ಜೀವನಗೊಳಿಸು, ಬುದ್ಧಿಮತ್ತೆ ಜ್ಞಾನೋದಯ ಪಡೆಯುವಂತೆ ಮಾಡು, ಅಹಂಕಾರದ ತಡೆಗಟ್ಟುಗಳು ಮುರಿದು ಬೀಳುವಂತೆ ಮಾಡು, ಅಜ್ಞಾನದ ಅಡೆತಡೆಗಳು ಚೆದುರಿ ಹೋಗುವಂತೆ ಮಾಡು, ಜಗತ್ತಿನ ಮೇಲೆ ಸಾರ್ವಭೌಮ ಯಜಮಾನನಾಗಿ ದೇದೀಪ್ಯಮಾನನಾಗಿ ಬೆಳಗುತ್ತಿರು.

**(1/113–20)** – ಶ್ರೀಮಾತೆ

*

## ಸ್ವರ್ಗವನ್ನು ನಮ್ಮ ಅಧೀನದಲ್ಲಿರಿಸಿಕೊಂಡಿದ್ದೇವೆ, ಆದರೆ ಪೃಥ್ವಿಯನ್ನಲ್ಲ

(ಶ್ರೀಮಾತೆ ಹಾಗೂ ಪಾಲ್ ರಿಚರ್ಡ ಅವರಿಗೆ 1915ರಲ್ಲಿ ಶ್ರೀ ಅರವಿಂದರು ತಮ್ಮ ಸಾಧನೆಯನ್ನು ಕುರಿತು ಬರೆದ ಪತ್ರಗಳು)

[1]

ಎಲ್ಲವೂ ಅತ್ಯಂತ ಒಳ್ಳೆಯದಕ್ಕಾಗಿ ಇರುತ್ತದೆ, ಆದರೆ ಬಾಹ್ಯ ದೃಷ್ಟಿಕೋನದಿಂದ ಕೆಲವೊಮ್ಮೆ ಅಸ್ತವ್ಯಸ್ತವಾದ ರೀತಿಯಲ್ಲಿ ಅತ್ಯಂತ ಒಳ್ಳೆಯದಾಗಿರುತ್ತದೆ. "ಕಂಗೆಟ್ಟ ಯುರೋಪ ದೇಶವನ್ನು ಭಗವಂತನ ಪಟ್ಟಣವಾಗುವಂತೆ ನಿರ್ಮಾಣ ಮಾಡು" ಎಂಬ ಶೀರ್ಷಿಕೆಯುಳ್ಳ ಅಲೌಕಿಕ ಸೂಕ್ಷ್ಮತೆಯುಳ್ಳ ನನ್ನ ಲೇಖನವೊಂದಿತ್ತು. ಅದು ಯೋಗ್ಯವಾಗಿರುವಷ್ಟರಮಟ್ಟಿಗೆಂದು ಅದನ್ನು ನಿಮಗೆ ಕೊಡುತ್ತಿದ್ದೇನೆ. ಬಹುಶಃ ಅದು ನಿಮ್ಮ ಮರುಕರೆಯುವಿಕೆ ಆಗುವಂತೆ ಮಾಡಿದ ಸಾಮರ್ಥ್ಯಗಳ ಅಭೀಪ್ಸೆ ಮಾತ್ರ. ಕೇವಲ ಯುರೋಪ ದೇಶ ಅಷ್ಟೇ ಅಲ್ಲ, ಇಡೀ ಜಗತ್ತೇ ವಿಘಟನೆ ಹೊಂದಿರುವ ಸ್ಥಿತಿಯಲ್ಲಿ ಇರುವುದಿಲ್ಲವೆ? ಏಶಿಯಾದಲ್ಲಿ ಎಲ್ಲಿಯೋ ಅಚಂಚಲವಾದ ದೇಶ ಇದೆ ಎಂಬುದರ ವಿಚಾರ ಕುರಿತು ಹೇಳುವುದಾದರೆ ಅದೆಲ್ಲಿ ಅಸ್ತಿತ್ವದಲ್ಲಿದೆ? ಇಡೀ ಪೃಥ್ವಿಯೇ ಈಗ ಒಂದು ನಿಯಮದಡಿಯಲ್ಲಿದೆ ಮತ್ತು ಒಂದೇ ಬಗೆಯ ಕಂಪನಗಳಿಗೆ



ಸ್ಪಂದಿಸುತ್ತಿದೆ ಮತ್ತು ನಮ್ಮನ್ನು ಬೆಂಬತ್ತಲಿರುವ ಹೋರಾಟದ ತುಮುಲವಿಲ್ಲದ ಯಾವುದಾದರೂ ಸ್ಥಳವನ್ನು ಕಂಡುಹಿಡಿಯುವುದರ ಬಗ್ಗೆ ನನಗೆ ಸಂದೇಹವಿದೆ. ಸಂದರ್ಭ ಏನೇ ಇರಲಿ, ಪರಿಣಾಮಕಾರಿ ನಿವೃತ್ತಿ ನನ್ನ ಅದೃಷ್ಟದಲ್ಲಿದೆ ಎಂದು ತೋರಿಬರುತ್ತಿಲ್ಲ. ವಿರೋಧಿ ಪರಿಸ್ಥಿತಿಗಳ ಮೇಲೆ ಜಯ ಸಾಧಿಸುವವರೆಗೆ ಇಲ್ಲವೆ ಅವುಗಳಿಗೆ ತುತ್ತಾಗುವವರೆಗೆ, ಇಲ್ಲವೆ ನನ್ನ ಅದೃಷ್ಟದಲ್ಲಿದ್ದಷ್ಟರ ಮಟ್ಟಿಗೆ ಆಧ್ಯಾತ್ಮಿಕ ಹಾಗೂ ಭೌತಿಕ ಇವುಗಳ ನಡುವಿನ ಸಂಘರ್ಷವನ್ನು ಮುಂದುವರಿಸಿಕೊಂಡು ಹೋಗಬೇಕಾಗಿರುವವರೆಗೆ ನಾನು ಜಗತ್ತಿನೊಡನೆ ಸಂಪರ್ಕದಲ್ಲಿರಬೇಕು. ವಿಷಯಗಳನ್ನು ಈ ರೀತಿಯಲ್ಲಿಯೇ ನಾನು ಯಾವಾಗಲೂ ನೋಡಿದ್ದೇನೆ ಮತ್ತು ಇನ್ನೂ ನೋಡುತ್ತಿದ್ದೇನೆ. ವಿಫಲತೆ, ತೊಂದರೆ ಮತ್ತು ತೋರಿಕೆಯ ಅಸಾಧ್ಯತೆ ಇವುಗಳನ್ನು ನಾನು ಸಾಕಷ್ಟು ರೂಢಿಸಿಕೊಂಡಿದ್ದೇನೆ. ಅವುಗಳ ಸತತ ಸ್ವ–ಮುಂದಿರಿಸುವಿಕೆ, ಕಳೆದು ಹೋಗುವ ಕ್ಷಣಗಳ ಹೊರತಾಗಿ ನನ್ನ ಮೇಲೆ ಬಹಳ ಪ್ರಭಾವ ಬೀರುವುದಿಲ್ಲ....

*

ಮನುಷ್ಯ ಸ್ಥಿರವಾದ ಹೃದಯವನ್ನು, ನೆಲೆಗೊಂಡ ಸಂಕಲ್ಪ, ಇಡಿಯಾದ ಸ್ವ–ಹಿತತ್ಯಾಗ ಇವುಗಳನ್ನು ಹೊಂದಿರುವ ಆವಶ್ಯಕತೆ ಇದೆ ಮತ್ತು ಅವನು ತನ್ನ ದೃಷ್ಟಿಯನ್ನು, ನಿಜವಾಗಿ ವಿಶ್ವಂಭರ ವಿಘಟನೆ ಇರುವಂತಹ ಈ ಕಾಲಗಳಲ್ಲಿ ಧೈರ್ಯಗುಂದದೆ, ಆಚೆಗಿರುವುದರ ಮೇಲೆ ನೆಟ್ಟಿರಬೇಕು. ನನ್ನನ್ನು ಕುರಿತು ಹೇಳುವುದಾದರೆ ನಾನು ದೈವೀ ವಾಣಿಯನ್ನು ಅನುಸರಿಸುತ್ತೇನೆ, ನನ್ನ ಬಲಗಡೆಗಾಗಲಿ, ಎಡಗಡೆಗಾಗಲಿ ನೋಡುವುದಿಲ್ಲ. ಪರಿಣಾಮ ನನ್ನದಲ್ಲ, ಮತ್ತು ಈಗ ಕನಿಷ್ಠಮಟ್ಟದಲ್ಲೂ ಶ್ರಮ ನನ್ನದಲ್ಲ.

6 May, 1915

[2]

ಸ್ವರ್ಗವನ್ನು ನಾವು ಅಧೀನಪಡಿಸಿಕೊಂಡಿದ್ದೇವೆ, ಆದರೆ ಪೃಥ್ವಿಯನ್ನಲ್ಲ, ಆದರೆ "ಸ್ವರ್ಗ ಮತ್ತು ಪೃಥ್ವಿ ಸಮಾನವಾಗಿವೆ, ಏಕವಾಗಿವೆ" ಎಂಬ ವೇದದಲ್ಲಿಯ ಸೂತ್ರದ ಪ್ರಕಾರ ಕಾರ್ಯ ಕೈಕೊಳ್ಳುವುದರಲ್ಲಿ ಯೋಗದ ಪೂರ್ಣತೆ ಇದೆ.

20 May, 1915

(ಶ್ರೀಮಾತೆಯವರು ತಮ್ಮ ದಿನಚರಿಯಲ್ಲಿ ಜುಲೈ 31, 1915ರಂದು ದಾಖಲಿಸಿದ್ದನ್ನು ಇಲ್ಲಿ ಪುನಃ ಹೇಳಲಾಗಿದೆ.)

ಸೇವೆ ಮಾಡುವವಳ, ಉಪಕರಣರೂಪದವಳಾಗಿರುವ ಪಾತ್ರವನ್ನು ವಹಿಸುತ್ತಿರುವ ನಾನು ಓ ಪ್ರಭು, ನಿನ್ನೆಡೆಗೆ ನಾನು ಹೊರಳಬೇಕೆ ಮತ್ತು ಆರಾಧನೆಯ ಸ್ತೋತ್ರವೊಂದನ್ನು ನಿನಗಾಗಿ ಹೇಳಬೇಕೆ? ಸನಾತನ ನೈಜತೆಯಲ್ಲಿ, ಅನಂತ ದಿವ್ಯಾನಂದದಲ್ಲಿ ನಿನ್ನೊಡನೆ ನನ್ನನ್ನು ಗುರುತಿಸಿಕೊಂಡು ಜನರನ್ನು ಕುರಿತು ಅವರಿಗೆ ಅರಿವಿಲ್ಲದ ಶಾಂತಿ ಹಾಗೂ ಸಂತೋಷಗಳನ್ನು ಕುರಿತು ಮಾತನಾಡಬೇಕೆ? ಇವೆರಡೂ ಮನೋಭಾವಗಳು ಏಕಕಾಲಿಕವಾದವುಗಳು, ಎರಡೂ ಪ್ರಜ್ಞೆಗಳು ಸಮಾನಾಂತರವಾದವುಗಳು ಮತ್ತು ಈ ನಿಕಟ, ಒಡೆಯಲಾಗದ ಏಕತೆಯಲ್ಲಿ ದೈವೀ ಪೂರ್ಣತೆ ಇದೆ.

ಸ್ವರ್ಗಗಳನ್ನು ನಿಶ್ಚಿತವಾಗಿ ಜಯಿಸಲಾಗಿದೆ, ಯಾವುದಕ್ಕೂ, ಯಾರಿಂದಲೂ ಅವುಗಳನ್ನು ನನ್ನಿಂದ ಕಿತ್ತುಕೊಳ್ಳುವುದು ಸಾಧ್ಯವಿಲ್ಲ, ಆದರೆ ಪೃಥ್ವಿಯ ಮೇಲೆ ಜಯ ಸಾಧಿಸುವುದನ್ನು ಇನ್ನೂ ಕೈಕೊಳ್ಳಬೇಕಾಗಿದೆ, ಅದನ್ನು ಗಲಭೆಯ ಹೃದಯದಲ್ಲಿಯೇ ಇದ್ದುಕೊಂಡು ಮಾಡಬೇಕಾಗಿದೆ, ಅದನ್ನು ಸಿದ್ಧಿಸಿಕೊಂಡಾಗಲೂ ಕೂಡ, ಅದು ಕೇವಲ ಸಾಪೇಕ್ಷ ರೀತಿಯದ್ದಾಗುತ್ತದೆ. ಈ ಲೋಕದಲ್ಲಿ ವಿಜಯಗಳನ್ನು ಹಂತ ಹಂತವಾಗಿ ದೊರಕಿಸಬೇಕಾಗುತ್ತದೆ, ಪ್ರಗತಿಪರವಾಗಿ ಅವು ಇನ್ನೂ ಹೆಚ್ಚು ವೈಭವಯುತವಾದ ವಿಜಯಗಳತ್ತ ಕೊಂಡೊಯ್ಯುತ್ತವೆ. ಮತ್ತು (ಭಗವಂತ) ನಿನ್ನ ಸಂಕಲ್ಪ, ಸಿದ್ಧಿಸಿಕೊಳ್ಳಬೇಕಾದುದು ಯಾವುದು ಎಂದು, ನನ್ನ ಮನಸ್ಸು ಕಲ್ಪಿಸಿಕೊಳ್ಳುವಂತೆ ಮಾಡುವುದೋ, ಅದು ನಿನ್ನ ಸನಾತನ ಯೋಜನೆಯಲ್ಲಿ ಕೇವಲ ಒಂದು ಅಂಶ, ಆದರೆ ನಿನ್ನೊಡನಿರುವ ಪರಿಪೂರ್ಣ ಏಕತೆಯಲ್ಲಿ ನಾನು ಈ ಯೋಜನೆ ಹಾಗೂ ಈ ಸಂಕಲ್ಪವಾಗಿದ್ದೇನೆ. ನನಗೆ ನೀನು ಒಪ್ಪಿಸಿದ ವಿಶೇಷ ಪಾತ್ರದ ಮೂಲಕ ಈ ವಿಭಜಿತ ಜಗತ್ತಿನಲ್ಲಿ ನಿಖರತೆ ಮತ್ತು ಚೈತನ್ಯಗಳೊಡನೆ ಲೀಲೆಯಲ್ಲಿ ತೊಡಗಿಕೊಂಡಾಗಲೂ ನಾನು ಅನಂತದ ಪರಮೋಚ್ಚ ದಿವ್ಯಾನಂದವನ್ನು ಆಸ್ವಾದಿಸುತ್ತೇನೆ.

ನನ್ನಲ್ಲಿರುವ ನಿನ್ನ ಸಾಮರ್ಥ್ಯ ಜೀವಂತ ಕಾರಂಜಿಯ ಹಾಗಿದೆ, ಬಲವತ್ತರವಾಗಿದೆ, ಸಮೃದ್ಧಿಯಿಂದಿದೆ, ಕಲ್ಲುಬಂಡೆಗಳ ಹಿಂದೆ ಶೋಧಿಸಿ ನೋಡುತ್ತ, ಅಡೆತಡೆಗಳನ್ನು ಮುರಿದುಹಾಕಲು ಚೈತನ್ಯಗಳನ್ನು ಒಟ್ಟುಗೂಡಿಸುತ್ತ, ಹಠಾತ್ತನೆ ಯಥೇಷ್ಟವಾಗಿ ಬಯಲಿನಲ್ಲಿ ಹೊರಹರಿದು ಬರುವುದು, ತನ್ನ ನೀರನ್ನು ಸಮತಟ್ಟಾದ ನೆಲದ ಮೇಲೆ ಸುರಿಯುವುದು ಮತ್ತು ಅದನ್ನು ಫಲವತ್ತಾಗಿಸುವುದು. ಈ ಹೊರ ಹೊಮ್ಮುವಿಕೆಯ ಗಳಿಗೆ ಎಂದು ಬರುವುದು? ಆ ಕ್ಷಣ ಬಂದಾಗ ಅದು ರಭಸದಿಂದ ಹರಿಯುತ್ತದೆ ಮತ್ತು ಶಾಶ್ವತತೆಯಲ್ಲಿ ಕಾಲ ಏನೂ ಅಲ್ಲ. ಈ ಆಂತರಿಕ ಸಂಚಯ, ಈ ಆಳವಾದ ಏಕಾಗ್ರತೆ ಇವು ತಂದುಕೊಡುವ, ನಿನ್ನ ನಾಳಿನ ಸಂಕಲ್ಪದ ಪ್ರಕಟಣೆಗೆ



ಅಧೀನವಾಗಿರುವ ಎಲ್ಲ ಶಕ್ತಿಗಳ ಗಾಢತೆಯನ್ನು ಯಾವ ಶಬ್ದಗಳಿಂದ ವರ್ಣಿಸಲು ಸಾಧ್ಯ? ಆ ಎಲ್ಲ ಶಕ್ತಿಗಳು ಜಗತ್ತಿನ ಮೇಲೆ ಹರಿದು ಹೋಗಿ ತಮ್ಮ ಸಾರ್ವಭೌಮ ಪ್ರವಾಹದಲ್ಲಿ ನಿನ್ನ ನಿನ್ನಿನ ಸಂಕಲ್ಪದಲ್ಲಿ ಅಭಿವ್ಯಕ್ತವಾಗಲೆಂದು ಪಟ್ಟುಹಿಡಿದು ಉಳಿದುಕೊಂಡಿರುವುದನ್ನು ಮುಳುಗಿಸಿಬಿಡಲು ತಯಾರಾಗುತ್ತವೆ, ಅದರಿಂದಾಗಿ ಪೃಥ್ವಿಯನ್ನು ನಿನ್ನ ಹೆಸರಿನಲ್ಲಿ ವಶಕ್ಕೆ ತೆಗೆದುಕೊಂಡು ಅದನ್ನು ನಿನ್ನದೇ ಹೆಚ್ಚು ಸಂಪೂರ್ಣ ಪ್ರತೀಕವೆಂದು ನಿನಗೆ ಅರ್ಪಿಸಲು ಸಾಧ್ಯವಾಗುವುದು.

ಪೃಥ್ವಿ ಮೃತ್ಯುವನ್ನಪ್ಪುವುದೆಂದು ಹೇಳಿರುವಿ, ಅದು ತನ್ನ ಹಳೆಯ ಅಜ್ಞಾನವನ್ನು ಕಳೆದುಕೊಳ್ಳುವ ಮೃತ್ಯುವನ್ನಪ್ಪುತ್ತದೆ.

ಪೃಥ್ವಿ ಜೀವಿಸುತ್ತದೆ ಎಂದು ಹೇಳಿರುವಿ, ಅದು ನಿನ್ನ ಸಾಮರ್ಥ್ಯ ಪುನರುದ್ಧರಿಸುವುದರಲ್ಲಿ ಜೀವಿಸುತ್ತದೆ.

ನಿನ್ನ ದೈವೀ ನಿಯಮದ ವೈಭವವನ್ನು ಕುರಿತು ಮತ್ತು ನಿನ್ನ ಕೀರ್ತಿಯ ಘನತೆಯನ್ನು ಕುರಿತು ವರ್ಣಿಸಲು ಯಾವ ಶಬ್ದಗಳಿಗೆ ಸಾಧ್ಯವಾದೀತು?

ನಿನ್ನ ದೈವೀ ಪ್ರಜ್ಞೆಯ ಪರಿಪೂರ್ಣತೆ ಮತ್ತು ನಿನ್ನ ಪ್ರೇಮದ ದಿವ್ಯಾನಂದ ವರ್ಣನಾತೀತವಾಗಿವೆ.

ಯಾವ ಶಬ್ದಗಳಿಗೆ ನಿನ್ನ ಅನಿರ್ವಚನೀಯ ದೈವೀ ಶಾಂತಿಯನ್ನು ವರ್ಣಿಸಲು ಸಾಧ್ಯವಾದೀತು, ನಿನ್ನ ದೈವೀ ನಿಶ್ಚಲನೀರವತೆಯನ್ನು ಹಾಗೂ ನಿನ್ನ ಸರ್ವ ಸಾಮರ್ಥ್ಯವಿರುವ ದೈವೀ ಸತ್ಯದ ಮಹಿಮೆಯನ್ನು ಯಾವ ಉತ್ಸವದಿಂದ ಗೌರವಿಸಲಾದೀತು?

ಪ್ರಕಟಗೊಂಡ ಇಡೀ ವಿಶ್ವ ನಿನ್ನ ವೈಭವ ಕುರಿತು ಮಾತನಾಡಲು ಮತ್ತು ನಿನ್ನ ಅದ್ಭುತಗಳನ್ನು ಕುರಿತು ಹೇಳಲು ಸಾಕಾಗುವುದಿಲ್ಲ ಮತ್ತು ಕಾಲದ ಶಾಶ್ವತತೆಯಲ್ಲಿ ಇದನ್ನೇ ಅದು ಹೆಚ್ಚು ಒಳ್ಳೆಯ ರೀತಿಯಲ್ಲಿ ಸತತ ಕೈಕೊಳ್ಳಲು ಪ್ರಯತ್ನಿಸುತ್ತಿರುತ್ತದೆ.

– ಶ್ರೀಮಾತೆ

[3]

ಆಂತರಿಕವಾದ ಪ್ರತಿಯೊಂದು ಪಕ್ವವಾಗಿದೆ ಇಲ್ಲವೆ ಪಕ್ವವಾಗುತ್ತಿದೆ, ಆದರೆ ಚಲನೆಯ ನಿರ್ಬಂಧಕ್ಕೆ ಒಳಗಾದ ಹೋರಾಟವಿದೆ. ಅದರಲ್ಲಿ ಯಾವ ಬದಿಯಲ್ಲಿಯೂ ಗಮನಾರ್ಹ ಪ್ರಗತಿ ಕಂಡುಬರುತ್ತಿಲ್ಲ (ಯುರೋಪಿನಲ್ಲಿ ಹೆಚ್ಚು ಕಡಿಮೆ ಕಾಯಂ ಆದ ಕಂದರಗಳಿಂದ ಸೈನಿಕರು ನಡೆಸುತ್ತಿದ್ದ ಹೋರಾಟ (trench warfare) ವಿದ್ದ

ಹಾಗಿದೆ.) ಆಧ್ಯಾತ್ಮಿಕ ಶಕ್ತಿ ಭೌತಿಕ ಜಗತ್ತಿನ ಪ್ರತಿರೋಧದ ವಿರುದ್ಧ ಒತ್ತಾಯ ತರುತ್ತದೆ. ಆ ಪ್ರತಿರೋಧ ಪ್ರತಿಯೊಂದು ಅಂಗುಲದಲ್ಲೂ ಅಲ್ಲಗಳೆಯುತ್ತಿದ್ದು ಹೆಚ್ಚು ಕಡಿಮೆ ಪ್ರತ್ಯಾಕ್ರಮಣಗಳನ್ನು ಮಾಡುತ್ತದೆ. ಅಂತರಂಗದಲ್ಲಿ ಆನಂದ ಹಾಗೂ ಬಲ ಇಲ್ಲದಿದ್ದರೆ ಅದು ಕಿರುಕುಳ ಕೊಡುವ ಹಾಗೂ ಜುಗುಪ್ಸೆ ತರಿಸುವ ಕಾರ್ಯವಾಗುತ್ತದೆ, ಆದರೆ ಜ್ಞಾನದ ಕಣ್ಣು ಆಚೆಗೆ ನೋಡುತ್ತದೆ ಮತ್ತು ಅದು ಕೇವಲ ದೀರ್ಘಗೊಳಿಸಲಾದ ಪ್ರಸಂಗ (episode) ಎಂಬುದನ್ನು ಕಂಡುಕೊಳ್ಳುತ್ತದೆ.

[4]

ಇತ್ತೀಚೆಗೆ ಬಿಡುಗಡೆಯಾದ ಆರ್ಯ ಸಂಚಿಕೆಯಲ್ಲಿ ಮಾನವ ಏಕತೆಯ ಆದರ್ಶ (Ideal of human unity) ಕುರಿತು ಹಲವಾರು ಲೇಖನಗಳನ್ನು ಪ್ರಕಟಿಸಲು ಪ್ರಾರಂಭಿಸಿದ್ದೇನೆ, ಬಹಳ ಕಾಳಜಿಪೂರ್ವಕ ಮುಂದುವರಿಯುವ ಉದ್ದೇಶವಿದೆ. ಮೊದಲಿಗೆ ಬಹಳ ಆಳಕ್ಕಿಳಿದು ಹೋಗುವುದಿಲ್ಲ, ಆದರೆ ಅದು ಓದುಗನ ಬುದ್ಧಿಮತ್ತೆಯನ್ನು ಏಕತೆಯ ಆಳವಾದ ಅರ್ಥದತ್ತ ಕ್ರಮೇಣ ಮುನ್ನಡೆಸಿಕೊಂಡು ಹೋಗುವ ರೀತಿಯದಾಗಿರುತ್ತದೆ. – ವಿಶೇಷವಾಗಿ ಏಕತೆ ಎಂದರೆ ಏಕರೂಪತೆ ಮತ್ತು ಯಾಂತ್ರಿಕ ರೂಪದ ಸಹಕಾರ ಎಂಬ ಅರ್ಥವನ್ನು ಒಪ್ಪಿಕೊಳ್ಳದಿರುವ ಹಾಗೆ ಮಾಡಬೇಕಾಗಿದೆ.

ವಸ್ತು–ವಿಷಯಗಳ ನಿಶ್ಚಲತೆಯನ್ನು ಯಾವುದೂ ಕ್ಷೋಭೆಗೊಳಪಡಿಸುತ್ತಿಲ್ಲ ಎಂದು ತೋರಿಬರುತ್ತಿದೆ ಮತ್ತು ನಮ್ಮ ಬಾಹ್ಯದಲ್ಲಿ ಕ್ರಿಯಾಶೀಲವಾದದ್ದೆಲ್ಲ ಒಂದು ಬಗೆಯ ಅಂಧಕಾರದಿಂದ ಕೂಡಿದೆ, ನಿರುತ್ಸಾಹಕರ ಗೊಂದಲದಂತಿದೆ, ಅದರಿಂದ ರೂಪಗೊಂಡ ಇಲ್ಲವೆ ಪ್ರಕಾಶಮಾನವಾದ ಯಾವುದೂ ಹೊರಹೊಮ್ಮಲಾರದು. ಅದು ಜಗತ್ತಿನ ವಿಚಿತ್ರ ಪರಿಸ್ಥಿತಿ, ಅಸ್ತವ್ಯಸ್ತತೆಯ ವ್ಯಾಖ್ಯೆ ಎಂಬಂತಿದೆ, ಅದರೊಂದಿಗೆ ಹಳೆಯ ಜಗತ್ತಿನ ಮೇಲ್ಮೈಯಲ್ಲಿದ್ದದ್ದು ತೋರಿಕೆಗೆ ಮೇಲ್ಭಾಗದಲ್ಲಿ ಅಖಂಡವಾಗಿ ನಿರ್ದಿಷ್ಟ ಸ್ಥಿತಿಯಲ್ಲಿ ಉಳಿದುಕೊಂಡಿದೆ, ಆದರೆ ಅದು ದೀರ್ಘಕಾಲದ ವಿಭಜನೆಯ ಅಸ್ತವ್ಯಸ್ತತೆ ಇಲ್ಲವೆ ಕೂಡಲೆ ಸಂಭವಿಸಲಿರುವ ಹೊಸ ಜನ್ಮವೆ? ದಿನದಿಂದ ದಿನಕ್ಕೆ ಆ ವಿಷಯವನ್ನೇ ಕುರಿತು ಹೋರಾಟ ನಡೆದಿದೆ, ಆದರೆ ಒಂದು ನಿರ್ಧಾರದತ್ತ ಇನ್ನೂ ಯಾವ ರೀತಿಯಲ್ಲೂ ಸಮೀಪಿಸಲಾಗಿಲ್ಲ.

ನಿಂತಲ್ಲಿ ನಿಂತಂತಿರುವ ಈ ಅವಧಿಗಳು ಮೇಲ್ಮೈಯ ಕೆಳಗೆ ನಡೆಯುತ್ತಿರುವ ಕಾರ್ಯವನ್ನು ಬಚ್ಚಿಡುತ್ತವೆ, ಆ ಕಾರ್ಯ ನಂತರ ಒಂದು ಬಗೆಯ ಅಭಿವೃದ್ಧಿಯನ್ನು ಉತ್ಪಾದಿಸುತ್ತದೆ.

ಸಪ್ಟಂಬರ 16, 1915



ಮಾರ್ಗದರ್ಶನ ದೊರಕಿಸದ ಚಿಂತನ, ಯೋಚನೆ ಇಲ್ಲವೆ ಪ್ರಚೋದನೆ ಇವುಗಳಲ್ಲಿ ಯಾವುದೂ ಮನುಷ್ಯನನ್ನು ಬಹಳ ದೂರ ಕರೆದೊಯ್ಯುವುದಿಲ್ಲ. ಮನಸ್ಸನ್ನು ಅದು ಕೇವಲ ಸಾಧ್ಯತೆಗಳ ಸುತ್ತ ಅನಿಶ್ಚಿತ ಪ್ರಯಾಣ ಕೈಕೊಳ್ಳುವಂತೆ ಮಾಡುತ್ತದೆ.

*

ಈ ವಿಷಯಗಳು, ನಿಜವಾಗಿ ಬಾಹ್ಯ ವಾಸ್ತವಾಂಶಗಳಿಗಿಂತ ಹೆಚ್ಚಾಗಿ ನಮ್ಮ ಮೇಲೆಯೇ ಅವಲಂಬಿಸಿರುತ್ತವೆ. ನಮ್ಮ ಯೋಚನೆಗಳಿಂದ, ಮಾನಸಿಕ ರಚನೆಗಳಿಂದ ನಾವು ತೊಂದರೆಗಳು ಮೇಲೆದ್ದುಬರುವಂತೆ ಮಾಡದಿದ್ದರೆ, ಇಲ್ಲವೆ ಅವು ಎದ್ದುಬಂದಾಗ ಅವುಗಳನ್ನು ದೃಢೀಕರಿಸದಿದ್ದರೆ, ನಮ್ಮಂತರಂಗದಲ್ಲಿ ಸ್ಥಿರತೆ, ಶಾಂತಿಗಳಿದ್ದರೆ, ನಮ್ಮ ಮೇಲೆ ಎರಗುವಂತೆ ಶತ್ರುವನ್ನು ಉದ್ರೇಕಕ್ಕೊಳಪಡಿಸದಿದ್ದರೆ, ಆಗ ಬಾಹ್ಯ ಸಾಧ್ಯತೆಗಳು ಮೂರ್ತರೂಪಗೊಳ್ಳುವುದಿಲ್ಲ.

*

ನಮ್ಮ ಸುತ್ತ ಇರುವ ವಿರೋಧಿ ಸಾಮರ್ಥ್ಯಗಳು ಹಾಗೂ ಸಂಭವಿಸುವ ಘಟನೆಗಳು ಎಂತಹವೇ ಇರಲಿ, ಸದ್ಯ ನಾವು ಆಧ್ಯಾತ್ಮಿಕ ಶಕ್ತಿ, ಸ್ಥಿರ ಜ್ಞಾನ ಮತ್ತು ಸಂತೋಷಗಳನ್ನು ಒಟ್ಟುಗೂಡಿಸಬೇಕಾಗಿದೆ, ಅದರಿಂದಾಗಿ ನಮ್ಮ ಕಾರ್ಯ ಪ್ರಾರಂಭವಾದಾಗ ನಾವು ಕಾರ್ಯ ಕೈಕೊಳ್ಳಬೇಕಾದ ಭೌತಿಕ ಜಗತ್ತಿನ ಮೇಲೆ ನಮ್ಮನ್ನು ಹೇರಲು ಶಕ್ತರಾಗುತ್ತೇವೆ. (ಇದನ್ನು ನಾನು ನಿಧಾನವಾಗಿ ಕೈಕೊಳ್ಳುತ್ತಿದ್ದೇನೆ, ನೀವು ಹೆಚ್ಚು ತೀವ್ರಗತಿಯಿಂದ ಕೈಕೊಳ್ಳುತ್ತಿದ್ದೀರಿ ಎಂದು ನನಗನಿಸುತ್ತದೆ.)

*

ನನ್ನ ಅಭಿಪ್ರಾಯದಲ್ಲಿ ಆಂತರಿಕವಾದದ್ದು ಬಾಹ್ಯದಲ್ಲಾಗುವುದಕ್ಕಿಂತ ಮೊದಲು ಬರಬೇಕು, ಹಾಗಿಲ್ಲದಿದ್ದರೆ ನಮ್ಮ ಸಾಮರ್ಥ್ಯ ಹಾಗೂ ಜ್ಞಾನಗಳಾಚೆಗಿರುವ ಯಾವುದೇ ಕಾರ್ಯವನ್ನು ಕೈಕೊಂಡಾಗ ಅದು ವಿಫಲವಾಗುವುದು ಇಲ್ಲವೆ ಭಗ್ನಗೊಳ್ಳುವುದು.

*

ಶಕ್ತಿಗಳು ಹಾಗೂ ಸಾಧ್ಯತೆಗಳು ಇರುವ ವೃತ್ತದಿಂದಾಚೆಗೆ ಸಾಗಿ ದೈವೀ ಸತ್ಯದ ಪ್ರಕಾಶ, ವಿಜ್ಞಾನ ಇವುಗಳಲ್ಲಿ ಪ್ರವೇಶ ಪಡೆಯಲು ಪ್ರಯತ್ನಿಸುತ್ತಿರುವುದೇ, ನಿಖರವಾದ, ನನ್ನ ಸದ್ಯದ ಹೋರಾಟವಾಗಿದೆ.

*

ಅಬ್ದುಲ್ ಬಹಾ ಕಂಡ ಪೂರ್ವದರ್ಶನ ಸರಿಯಾಗಿಯೇ ಇರುವ ಸಾಧ್ಯತೆಯಿದೆ. ಆದರೆ ಸದ್ಯ ಅದನ್ನು ಬಹಳ ಕಟ್ಟುನಿಟ್ಟಿನ ರೂಪದಲ್ಲಿ ಇರಿಸಲಾಗಿದೆ ಎಂದು ನನಗೆ

ತೋರಿಬರುತ್ತದೆ. ಪ್ರಕಾಶದ ಕೇಂದ್ರವಿದೆ, ಅದನ್ನು ಅವಶ್ಯವಾಗಿ ಭೌತಿಕ ಗುಂಪಿನ ರೂಪದಲ್ಲಿ ಇರಿಸಬೇಕಾಗಿಲ್ಲ, ಆದರೆ ಅದರಲ್ಲಿ ಕೆಲವರು ನಿಲ್ಲಬಹುದು, ವಿಸ್ತರಿಸಿ ಕೊಳ್ಳುತ್ತಿರುವ ಪ್ರಕಾಶಮಯ ವೃತ್ತವಿದೆ, ಅದರಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸಬಹುದು. ಬಾಹ್ಯದಲ್ಲಿ ಪ್ರಕಾಶದೊಡನೆ ಹೋರಾಡುತ್ತಿರುವ ಮಂದ ಪ್ರಕಾಶದಲ್ಲಿರುವ ಜಗತ್ತಿದೆ. ಇದೇ ಅನಿವಾರ್ಯವಾಗಿ ಅನುಸರಿಸಬೇಕಾದ ಗತಿ.

ಆ ಪ್ರಕಾಶದಲ್ಲಿಯೇ ಇರುವುದಕ್ಕಿಂತ ಹೆಚ್ಚಾಗಿ ನಾವಿನ್ನೂ ಪ್ರಕಾಶದ ಪ್ರತಿಫಲನದಲ್ಲಿ ಜೀವಿಸುತ್ತಿದ್ದೇವೆ. ಅದರ ಕೇಂದ್ರದ ಹತ್ತಿರ ಸಾಗುವವರೆಗೆ ನಾವು ತಿಳಿದುಕೊಳ್ಳಲಾರೆವು.

ನನಗೆ ಕಳಿಸಿಕೊಟ್ಟ ಯೋಜನೆ ಮನಸ್ಸಿನಿಂದ ರಚಿತವಾದದ್ದೆಂದು ತೋರಿಬರುತ್ತಿದೆ, ಅದನ್ನು ಪರಿಸರದ ಪ್ರಭಾವದಿಂದ ರಚಿಸಲಾಗಿದೆ, ಅದನ್ನು ಆಚರಣೆಯಲ್ಲಿ ತರಲು ಸಾಧ್ಯವಿದೆ ಎಂದು ನನಗನಿಸುವುದಿಲ್ಲ, ಏಕೆಂದರೆ ಜಗತ್ತು ಅದಕ್ಕಾಗಿ ಇನ್ನೂ ಸಿದ್ಧವಾಗಿಲ್ಲ ಮತ್ತು ಇಂತಹದನ್ನೇನಾದರೂ ಕೈಕೊಳ್ಳಲು ಪ್ರಯತ್ನಿಸಿದರೆ ಅದನ್ನು ನಿಷ್ಠೆಯಿಂದ ಪ್ರಾರಂಭಿಸಲಾಗುವುದಿಲ್ಲ ಮತ್ತು ನಿಷ್ಠೆಯಿಂದ ನಿರ್ವಹಿಸಲಾಗುವುದಿಲ್ಲ. ನಾವು ಚಿಂತನೆ ಮಾಡುವ ಇಂತಹ ದೊಡ್ಡ ಯೋಜನೆಯ ಗುರಿಗೆ ಉಪಯುಕ್ತವಾಗಬೇಕಾದರೆ ಮನುಕುಲದ ಹೃದಯದಲ್ಲಿ ಒಂದು ಬದಲಾವಣೆಯಾಗಬೇಕು, ಅಲ್ಲಿ ಹೊಸ ಹೃದಯ ಬರಬೇಕು. ಅತ್ಯಾತುರದ ರೂಪಗೊಳ್ಳುವಿಕೆ ಭಗ್ನಗೊಳ್ಳುವುದು ಎಷ್ಟೇ ಹಾನಿಕಾರಕವಾದರೂ ಅದನ್ನು ನಾನು ಹೆಚ್ಚು ಇಷ್ಟಪಡುತ್ತೇನೆ.

ನವ್ಹೆಂಬರ 18, 1915

[6]

ನೀವು ವರ್ಣನೆ ಮಾಡಿದ ಅನುಭವ, ನಿಜವಾದ ಅರ್ಥದಲ್ಲಿ ವೈದಿಕವಾದದ್ದು. ಆದಾಗ್ಯೂ ವೈದಿಕ ಎಂದು ತಮ್ಮನ್ನು ಕರೆದುಕೊಳ್ಳುವ ಆಧುನಿಕ ಯೋಗ ಪದ್ಧತಿಗಳು ಅದು ಹಾಗಿರುವುದನ್ನು ಸುಲಭವಾಗಿ ಗುರುತಿಸುವುದಿಲ್ಲ. ಅದು ವೇದ, ಪುರಾಣಗಳಲ್ಲಿ ಹೇಳಲಾದ ಪೃಥ್ವಿ ದೈವೀ ತತ್ವದೊಂದಿಗೆ ಏಕತೆ ಪಡೆಯುವುದಾಗಿದೆ. ಆ ಪೃಥ್ವಿ ನಮ್ಮ ಪೃಥ್ವಿಯ ಮೇಲ್ಗಡೆಗಿದೆ ಎಂದು ಹೇಳಲಾಗಿದೆ, ಎಂದರೆ ಈ ಜಗತ್ತಿನ ಹಾಗೂ ದೇಹದ ಭೌತಿಕ ಸತ್ತೆ ಮತ್ತು ಪ್ರಜ್ಞೆಗಳು ಕೇವಲ ಪ್ರತೀಕಗಳಾಗಿವೆ. ಆದರೆ ಆಧುನಿಕ ಯೋಗಗಳು ಭೌತಿಕವಾಗಿ ಭಗವಂತನೊಡನೆ ಏಕತೆ ಪಡೆಯುವುದನ್ನು ಗುರುತಿಸುವುದು ಅಪರೂಪಕ್ಕೆ ಕಂಡುಬರುತ್ತದೆ.

ಡಿಸೆಂಬರ 15, 1915

(ಆಧ್ಯಾತ್ಮಿಕ ಪ್ರಗತಿಯ ಮಾರ್ಗದಲ್ಲಿ ಕಾಣಿಸಿಕೊಳ್ಳುವ ತೊಂದರೆಗಳನ್ನು ಕುರಿತು



ಶ್ರೀ ಅರವಿಂದರು 23–6–1916ರಂದು ಬರೆದ ಇನ್ನೊಂದು ದೀರ್ಘ ಪತ್ರವಿದೆ. ಅದನ್ನು ಇಲ್ಲಿ ಮುದ್ರಿಸಲಾಗಿಲ್ಲ. ಓದುಗರು ವಿವರಗಳಿಗಾಗಿ (CWSA Vol. 36 Complete Works of Sri Aurobindo) ಗ್ರಂಥವನ್ನು ನೋಡಬಹುದು.)

*

## ಇಬ್ಬರಲ್ಲಿರುವ ಒಂದೇ ಪ್ರಜ್ಞೆ

ಶ್ರೀಮಾತೆಯವರ ಪ್ರಜ್ಞೆ ನನ್ನ ಪ್ರಜ್ಞೆಯೇ ಆಗಿದೆ. ಒಂದೇ ಪ್ರಜ್ಞೆ ಇಬ್ಬರಲ್ಲಿಯೂ ಇದೆ. ಏಕೆಂದರೆ ಲೀಲೆಗಾಗಿ ಅದರ ಆವಶ್ಯಕತೆ ಇದೆ. ಅವರ ಜ್ಞಾನ, ಶಕ್ತಿಗಳಿಲ್ಲದೆ, ಅವರ ಪ್ರಜ್ಞೆ ಇಲ್ಲದೆ ಏನನ್ನೂ ಮಾಡಲಾಗುವುದಿಲ್ಲ. ಯಾರಿಗಾದರೂ ಅವರ ಪ್ರಜ್ಞೆಯ ಅರಿವಾದಾಗ ನನ್ನ ಪ್ರಜ್ಞೆಯೂ ಅಲ್ಲಿರುವುದೆಂದು ತಿಳಿದುಕೊಳ್ಳಬೇಕು, ಅವರಿಗೆ ನನ್ನ ಪ್ರಜ್ಞೆಯ ಭಾವನೆ ಬಂದರೆ ಶ್ರೀಮಾತೆಯವರದು ಅಲ್ಲಿರುತ್ತದೆಂದು ತಿಳಿದುಕೊಳ್ಳಬೇಕು.

*

ಶ್ರೀಮಾತೆಯವರ ಮಾರ್ಗ ಹಾಗೂ ನನ್ನ ಮಾರ್ಗ ಇವುಗಳಲ್ಲಿ ಭೇದವಿಲ್ಲ, ನಮ್ಮದು ಒಂದೇ ಮಾರ್ಗವಾಗಿದೆ. ಅತಿಮಾನಸ ಬದಲಾವಣೆಯತ್ತ ಹಾಗೂ ದೈವೀ ಸಿದ್ಧಿಯತ್ತ ಕೊಂಡೊಯ್ಯುವ ಮಾರ್ಗವನ್ನು ನಾವು ಯಾವಾಗಲೂ ಆಯ್ದುಕೊಂಡಿದ್ದೇವೆ, ಕೇವಲ ಕೊನೆಯಲ್ಲಷ್ಟೇ ಅಲ್ಲ, ಆದರೆ ಅದೇ ಮಾರ್ಗವನ್ನು ಪ್ರಾರಂಭದಿಂದಲೇ ಅಯ್ದುಕೊಂಡಿದ್ದೇವೆ.

*

ಶ್ರೀ ಅರವಿಂದರನ್ನು[1] ಭೇಟಿ ಮಾಡುವುದಕ್ಕಿಂತಲೂ ಮೊದಲಿನಿಂದಲೇ ಶ್ರೀಮಾತೆಯವರು ಯೋಗ ಸಾಧನೆಯನ್ನು ಮಾಡುತ್ತಿದ್ದರು, ಆದರೆ ಅವರ ಸಾಧನೆಯ ಮಾರ್ಗಗಳು ಒಂದೇ ದಿಶೆಯಲ್ಲಿದ್ದವು. ಅವರು ಭೇಟಿ ಮಾಡಿದಾಗ ಸಾಧನೆಯನ್ನು ಪರಿಪೂರ್ಣಗೊಳಿಸಲು ಒಬ್ಬರು ಇನ್ನೊಬ್ಬರಿಗೆ ಸಹಾಯ ಮಾಡಿದರು. ಶ್ರೀ ಅರವಿಂದರ ಯೋಗ ಎಂದು ಕರೆಯಲಾಗುವುದನ್ನು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಒಟ್ಟಿಗೆ ಸೃಷ್ಟಿಮಾಡಿದುದಾಗಿದೆ. ಈಗ ಅವರು ಒಬ್ಬರನ್ನೊಬ್ಬರನ್ನು ಗುರುತಿಸಿಕೊಂಡಿದ್ದಾರೆ. – ಆಶ್ರಮದಲ್ಲಿ ಎಲ್ಲ ಸಾಧನೆ ಹಾಗೂ ಎಲ್ಲ ವ್ಯವಸ್ಥೆಯನ್ನು

---

1. ತಾವು ಮೂರನೆಯವರು ಎಂದು ಕಂಡುಬರುವ ರೀತಿಯಲ್ಲಿ ಬಾಯಿಂದ ಹೇಳಿ ಬರೆಸಿದ ಪತ್ರ.

ಶ್ರೀಮಾತೆಯವರು ನೇರವಾಗಿ ನೋಡಿಕೊಳ್ಳುತ್ತಾರೆ, ಶ್ರೀ ಅರವಿಂದರು ಅವರಿಗೆ ಹಿಂದಿನಿಂದ ಆಧಾರ ಒದಗಿಸುತ್ತಾರೆ. ಯೋಗವನ್ನು ಆಚರಿಸಲೆಂದು ಇಲ್ಲಿಗೆ ಬರುವವರೆಲ್ಲರೂ ಶ್ರೀಮಾತೆಯವರಿಗೆ ಶರಣಾಗಬೇಕು, ಅವರು ಎಲ್ಲರಿಗೆ, ಯಾವಾಗಲೂ ಸಹಾಯ ಮಾಡುತ್ತಾರೆ ಮತ್ತು ಅವರ ಆಧ್ಯಾತ್ಮಿಕ ಜೀವನವನ್ನು ನಿರ್ಮಾಣ ಮಾಡುತ್ತಾರೆ.

ಶ್ರೀಮಾತೆಯವರು ಶ್ರೀ ಅರವಿಂದರ ಶಿಷ್ಯೆಯಲ್ಲ. ಅವರಿಗೆ ಶ್ರೀ ಅರವಿಂದರಿಗಾದ ಸಿದ್ಧಿ ಹಾಗೂ ಅನುಭವಗಳು ದೊರಕಿದ್ದವು.

ಅತಿ ಚಿಕ್ಕವರಾಗಿ ಇದ್ದಾಗಿನಿಂದಲೇ ಶ್ರೀಮಾತೆಯವರ ಸಾಧನೆ ಪ್ರಾರಂಭವಾಗಿತ್ತು. ಅವರು ಹನ್ನೆರಡು, ಹದಿಮೂರು ವರ್ಷದವರಿದ್ದಾಗ ಪ್ರತಿದಿನ ಸಾಯಂಕಾಲ ಹಲವಾರು ಬೋಧಕರು ಅವರಿಗೆ ವಿಭಿನ್ನ ಆಧ್ಯಾತ್ಮಿಕ ಶಿಸ್ತುಪಾಲನೆಗಳನ್ನು ಕಲಿಸಿಕೊಡುತ್ತಿದ್ದರು. ಅವರಲ್ಲೊಬ್ಬರು ಏಶಿಯಾದ ಕಪ್ಪು ವರ್ಣದವರಿದ್ದರು, ಅವರನ್ನು ಶ್ರೀಮಾತೆ ದೀರ್ಘಕಾಲದಿಂದ ನೋಡುತ್ತ ಬಂದಿದ್ದರು, ಶ್ರೀ ಅರವಿಂದರನ್ನು ಭೇಟಿ ಮಾಡಿದ ತತ್ಕ್ಷಣ ಏಶಿಯಾದ ಆ ಕಪ್ಪು ವರ್ಣದ ವ್ಯಕ್ತಿ ಇವರೇ ಎಂದು ಗುರುತಿಸಿದರು. ಅವರು ಪಾಂಡೀಚೇರಿಗೆ ಬರಬೇಕು, ಶ್ರೀ ಅರವಿಂದರೊಡನೆ ಕಾರ್ಯ ಕೈಕೊಳ್ಳಬೇಕು ಎಂಬುದು ದೈವ ಸಂಕಲ್ಪದ ವಿಷಯವಾಗಿತ್ತು.

ಶ್ರೀಮಾತೆಯವರು ಭಾರತಕ್ಕೆ ಬರುವ ಮೊದಲೇ ಬೌದ್ಧರ ಯೋಗ ಹಾಗೂ ಗೀತೆಯ ಯೋಗ ಸಾಧನೆಯಲ್ಲಿ ಪರಿಣಿತರಾಗಿದ್ದರು, ಅವರ ಯೋಗ ಶ್ರೇಷ್ಠತರ ಸಮನ್ವಯದತ್ತ ಸಾಗುತ್ತಿತ್ತು. ಇದಾದ ನಂತರ ಅವರು ಪಾಂಡೀಚೇರಿಗೆ ಬರುವುದು ಸ್ವಾಭಾವಿಕವಾಗಿತ್ತು. ಶ್ರೀ ಅರವಿಂದರ ಯೋಗಕ್ಕೆ ಮೂರ್ತರೂಪ ಕೊಡಲು ಅವರು ಸಹಾಯ ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ. ಅವರ ಸಹಾಯವಿಲ್ಲದಿದ್ದರೆ ಶ್ರೀ ಅರವಿಂದರ ಯೋಗ ಮೂರ್ತರೂಪ ಕಂಡುಕೊಳ್ಳುತ್ತಿರಲಿಲ್ಲ.

ಈ ಯೋಗದಲ್ಲಿ ಇರಿಸಬೇಕಾದ ಎರಡು ಮಹತ್ವದ ಹೆಜ್ಜೆಗಳಲ್ಲಿ ಒಂದು ಶ್ರೀಮಾತೆಯವರಿಗೆ ಶರಣಾಗುವುದಾಗಿದೆ.[1]

*

1. "ಎರಡನೆಯ ಶ್ರೇಷ್ಠ ಹೆಜ್ಜೆ ಯಾವುದು?" ಎಂದು ಶ್ರೀ ಅರವಿಂದರನ್ನು ಮತ್ತೊಂದು ಸಂದರ್ಭದಲ್ಲಿ ಕೇಳಿದಾಗ "ಸಾಧಕ ದೈವೀ ಜೀವನಕ್ಕಾಗಿ ಅಭೀಪ್ಸೆ ಪಡುವುದಾಗಿದೆ" ಎಂದು ಉತ್ತರ ನೀಡಿದರು.



ನಾನು ಶ್ರೀ ಅರವಿಂದರ ಶಕ್ತಿ ಮಾತ್ರವಾಗಿದ್ದೇನೆ, ಮತ್ತು ನನ್ನ ಎಲ್ಲ ಮಕ್ಕಳ ತಾಯಿಯಾಗಿದ್ದೇನೆ.

ನನ್ನ ಮಕ್ಕಳೆಲ್ಲರೂ ಸಮನಾಗಿ ನನ್ನ ಪ್ರಜ್ಞೆಯ ಹಾಗೂ ನನ್ನ ಸತ್ತೆಯ ಭಾಗವಾಗಿದ್ದಾರೆ. ಪರಿವರ್ತನೆಗೊಂಡ ಬಳಿಕ, ಸಿದ್ಧಿಸಿಕೊಂಡ ನಂತರ ಪ್ರತಿಯೊಬ್ಬರಿಗೂ ನನ್ನ ಹಾಗೂ ಶ್ರೀ ಅರವಿಂದರ ಒಂದೊಂದು ಮುಖವನ್ನು ಪ್ರಕಟಿಸುವ ಹಕ್ಕು ಇರುತ್ತದೆ.

ಸಾಮಾನ್ಯವಾಗಿರುವ ಪ್ರಕಟಣೆಯ ಒಗ್ಗಟ್ಟಿನಲ್ಲಿರುವ ಎಲ್ಲರ ಏಕತೆಯು ಹೊಸ ಹಾಗೂ ದೈವೀ ಜಗತ್ತನ್ನು ಪೃಥ್ವಿಯ ಮೇಲೆ ಸೃಷ್ಟಿಸಲು ಅನುವು ಮಾಡಿಕೊಡುತ್ತದೆ. ಪ್ರತಿಯೊಬ್ಬನೂ ತನ್ನ ಭಾಗವನ್ನು ತರುತ್ತಾನೆ, ಆದರೆ ಇಡಿಯಾದ ಒಗ್ಗಟ್ಟಿನ ಸಾಮರ್ಥ್ಯವೊಂದು ಎಂಬುದರ ಹೊರತಾಗಿ ಯಾವ ಭಾಗವೂ ಸಂಪೂರ್ಣವಾಗದು.

(1927ರಲ್ಲಿ ಶ್ರೀ ಅರವಿಂದರಿಂದ ರಚಿತವಾದದ್ದು)

**(WSA 32/79, 81, 81-82, 36, 22-23, 84, 23)** – ಶ್ರೀ ಅರವಿಂದರು

*

## ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬೋಧನೆ

ಅಸ್ತಿತ್ವ ಒಂದು ಅಕಸ್ಮಿಕ ಸಾಧನೆಯಲ್ಲ, ಯಾರಿಂದಲೂ ಆಗಿರದ, ಗೊತ್ತು ಗುರಿಯಿಲ್ಲದ ಸೃಷ್ಟಿಯಲ್ಲ, ಹೊಣೆಗಾರಿಕೆ ಇಲ್ಲದೆ ಸಂಭವಿಸಿದ ವಿಷಯವಲ್ಲ. ಅದು ತನ್ನಲ್ಲಿಯೇ ದೇವನ ದೈವೀ ಶಬ್ದವನ್ನು ಕೊಂಡೊಯ್ಯುತ್ತದೆ, ದೈವೀ ಸಾನ್ನಿಧ್ಯದಿಂದ ತುಂಬಿಕೊಂಡಿದೆ.

ಅಸ್ತಿತ್ವ ಯಾವ ಗುರಿ, ಅರ್ಥ ಇಲ್ಲವೆ ಉದ್ದೇಶವಿಲ್ಲದೆ, ಹೇಗೋ ಬಂದು ಹೇಯ ಚಲನೆಯನ್ನು ಪ್ರಾರಂಭ ಮಾಡಿದ ಕುರುಡು ಯಂತ್ರವಲ್ಲ. ಅದು ಹಂತ ಹಂತವಾಗಿ ತೆರೆದುಕೊಳ್ಳುವ ವಿಧಾನದಿಂದ ಪ್ರಕಟವಾಗುತ್ತಿರುವ ವಸ್ತು–ವಿಷಯಗಳ ದೈವೀ ಸತ್ಯ, ತನ್ನಲ್ಲಿಯೇ ತೊಡಗಿಕೊಂಡಿರುವ ದೈವೀ ನೈಜತೆಯ ಉತ್ಕ್ರಾಂತಿ.

ಅದು ಅಸ್ತಿತ್ವದಲ್ಲಿರಲು ಕಾರಣವಿಲ್ಲದ, ಕೈಕೊಳ್ಳಬೇಕಾದ ವ್ಯವಹಾರವಿಲ್ಲದ, ಅಸ್ತಿತ್ವದಲ್ಲಿರದ, ಆದರೆ ಇರುವಂತೆ ತೋರಿಬರುವ ಮಾಯೆಯಲ್ಲ. ಮಹತ್ತರವಾದ ದೈವೀ ನೈಜತೆ ತನ್ನಲ್ಲಿಯೇ ಈ ಅದ್ಭುತ ವಿಶ್ವವನ್ನು ಪ್ರಕಟಿಸುತ್ತದೆ.

*

ವಿಶ್ವದಲ್ಲಿ ತೋರಿಬರುವುದರ ಹಿಂದೆ ದೈವೀ ಸತ್ತೆಯ ಹಾಗೂ ಪ್ರಜ್ಞೆಯ ನೈಜತೆಯಾದ ಎಲ್ಲ ಆತ್ಮಗಳ ಸನಾತನ ಏಕೈಕನಿದ್ದಾನೆ ಎಂಬ ಭಾರತದ ಪ್ರಾಚೀನ ಕಾಲದ ಋಷಿಗಳ ಬೋಧನೆಯಿಂದ ಶ್ರೀ ಅರವಿಂದರದು ಪ್ರಾರಂಭವಾಗುತ್ತದೆ. ಎಲ್ಲ ಸತ್ತೆಗಳು ಆ ಏಕ ದೈವೀ ಆತ್ಮದಲ್ಲಿ ಒಂದಾಗಿವೆ, ಆದರೆ ಪ್ರಜ್ಞೆಯ ಒಂದು ಬಗೆಯ ಪ್ರತ್ಯೇಕತೆಯಿಂದ, ತಮ್ಮ ನಿಜವಾದ ದೈವೀ ಆತ್ಮದ ಬಗ್ಗೆ ಮತ್ತು ಮನಸ್ಸು, ಪ್ರಾಣ ಹಾಗೂ ದೇಹಗಳಲ್ಲಿರುವ ದೈವೀ ನೈಜತೆಯ ಬಗ್ಗೆ ಇರುವ ಅಜ್ಞಾನದಿಂದ ವಿಭಜನೆಗೆ ಒಳಗಾಗಿವೆ. ಒಂದು ಬಗೆಯ ಮನಶ್ಶಾಸ್ತ್ರೀಯ ಶಿಸ್ತುಪಾಲನೆಯಿಂದ ಪ್ರತ್ಯೇಕಗೊಳಿಸುವ ಈ ಪರದೆಯನ್ನು ತೆಗೆದುಹಾಕಬಹುದಾಗಿದೆ ಮತ್ತು ನಮ್ಮೆಲ್ಲರಲ್ಲಿರುವ ನಿಜವಾದ ಆತ್ಮದ ಇಲ್ಲವೆ ಭಗವಂತನ ಬಗ್ಗೆ ಅರಿವುಳ್ಳವರು ಆಗಬಹುದಾಗಿದೆ.

ಈ ಏಕೈಕ ದೈವೀಸತ್ತೆ ಮತ್ತು ಪ್ರಜ್ಞೆ ಎಂಬುದು ಜಡದಲ್ಲಿ ತೊಡಗಿಕೊಂಡಿದೆ ಎಂದು ಶ್ರೀ ಅರವಿಂದರ ಬೋಧನೆ ತಿಳಿಸುತ್ತದೆ. ಉತ್ಕ್ರಾಂತಿಯು ಜಡದಿಂದ ಪ್ರಜ್ಞೆ ಬಿಡುಗಡೆ ಪಡೆಯುವ ವಿಧಾನವಾಗಿದೆ, ಪ್ರಜ್ಞಾರಹಿತವಾದದ್ದು ಎಂದು ತೋರಿಬರುವುದರಲ್ಲಿ ಪ್ರಜ್ಞೆ ಕಾಣಿಸಿಕೊಳ್ಳುತ್ತದೆ, ಒಮ್ಮೆ ಹೀಗೆ ಕಾಣಿಸಿಕೊಂಡ ನಂತರ ಅದು ಉಚ್ಚತರವಾಗಿ ಬೆಳೆಯುವುದಕ್ಕೆ ಮತ್ತು ಅದೇ ಕಾಲಕ್ಕೆ ಹೆಚ್ಚು ಪರಿಪೂರ್ಣತೆಯೆಡೆಗೆ ವಿಸ್ತಾರಗೊಳ್ಳುವುದಕ್ಕೆ ಹಾಗೂ ಆಭಿವೃದ್ಧಿ ಪಡೆಯುವುದಕ್ಕೆ ಸ್ವ–ಒತ್ತಡಕ್ಕೊಳಗಾಗುತ್ತದೆ. ಪ್ರಜ್ಞೆಯ ಬಿಡುಗಡೆಯ ಮೊದಲ ಹೆಜ್ಜೆಯೆಂದರೆ ಜಡದಲ್ಲಿ ಪ್ರಾಣ ಕಾಣಿಸಿಕೊಳ್ಳುವುದಾಗಿದೆ, ಮನಸ್ಸು ಕಾಣಿಸಿಕೊಳ್ಳುವುದು ಎರಡನೆಯ ಹೆಜ್ಜೆ. ಆದರೆ ಉತ್ಕ್ರಾಂತಿಯು ಮನಸ್ಸಿನೊಂದಿಗೆ ಕೊನೆಗೊಳ್ಳುವುದಿಲ್ಲ, ಅದು ಇನ್ನೂ ಹೆಚ್ಚಿನದರಲ್ಲಿ ಬಿಡುಗಡೆ ಹೊಂದಲು ಕಾದಿರುತ್ತದೆ, ಈ ಹೆಚ್ಚಿನದು ಆಧ್ಯಾತ್ಮಿಕ ಹಾಗೂ ಅತಿಮಾನಸದ್ದಾಗಿರುತ್ತದೆ. ಉತ್ಕ್ರಾಂತಿಯ ಮುಂದಿನ ಹೆಜ್ಜೆ ಅತಿಮಾನಸ ಹಾಗೂ ದಿವ್ಯಾತ್ಮದ ಅಭಿವೃದ್ಧಿಯು ಪ್ರಜ್ಞೆಯುಳ್ಳ ಸತ್ತೆಯಲ್ಲಿ ಪ್ರಾಬಲ್ಯವುಳ್ಳ ಸಾಮರ್ಥ್ಯವಾಗುವತ್ತ ಇರಬೇಕು. ಏಕೆಂದರೆ ಆಗ ಮಾತ್ರ ವಸ್ತು–ವಿಷಯಗಳಲ್ಲಿ ತೊಡಗಿಕೊಂಡ ಪ್ರಜ್ಞೆ ಸಂಪೂರ್ಣವಾಗಿ ತನ್ನನ್ನು ಇಡಿಯಾಗಿ ಬಿಡುಗಡೆ ಮಾಡಿಕೊಳ್ಳುವುದು ಮತ್ತು ಜೀವನಕ್ಕೆ ಪರಿಪೂರ್ಣತೆಯನ್ನು ಪ್ರಕಟಿಸಲು ಸಾಧ್ಯವಾಗುವುದು.

ಉತ್ಕ್ರಾಂತಿಯು ತನ್ನ ಮೊದಲ ಹೆಜ್ಜೆಗಳನ್ನು ಪ್ರಜ್ಞಾಪೂರ್ಣ ಸಂಕಲ್ಪವಿಲ್ಲದೆ ಸಸ್ಯ ಜೀವನ, ಪಶು ಜೀವನಗಳಲ್ಲಿರಿಸಿತ್ತು, ಮನುಷ್ಯನಲ್ಲಿ ಮಾತ್ರ ಪ್ರಜ್ಞಾಪೂರ್ಣ ಸಂಕಲ್ಪವನ್ನು ಅವನ ಉಪಕರಣದಲ್ಲಿ ಅಭಿವೃದ್ಧಿಗೊಳಿಸಲು ಪ್ರಕೃತಿಗೆ ಸಾಧ್ಯವಾಯಿತು. ಆದಾಗ್ಯೂ ಮಾನಸಿಕ ಸಂಕಲ್ಪದಿಂದ ಉತ್ಕ್ರಾಂತಿಯ ಕಾರ್ಯವನ್ನು ಪೂರ್ತಿಯಾಗಿ ಮಾಡಲಾಗದು, ಏಕೆಂದರೆ ಮನಸ್ಸು ಒಂದು ನಿಶ್ಚಿತ ಹಂತದವರೆಗೆ ಮಾತ್ರ



ಹೋಗಬಲ್ಲದು, ನಂತರ ಅದಕ್ಕೆ ವೃತ್ತಾಕಾರದಲ್ಲಿ ಸುತ್ತಲು ಮಾತ್ರ ಸಾಧ್ಯವಾಗುತ್ತದೆ. ಪರಿವರ್ತನೆಯೊಂದನ್ನು ಮತ್ತು ಮನಸ್ಸು ಉಚ್ಚತರ ತತ್ವದಲ್ಲಿ ಬದಲಾಗುವಂತೆ ಪ್ರಜ್ಞೆಯ ಹೊರಳುವಿಕೆಯನ್ನು ಮಾಡಬೇಕಾಗುತ್ತದೆ.

ಅವರ ಉದ್ದೇಶ ಯಾವುದೇ ಒಂದು ಧರ್ಮವನ್ನು ಆಭಿವೃದ್ಧಿ ಪಡಿಸುವು– ದಾಗಿರಲಿಲ್ಲ, ಇಲ್ಲವೆ ಪ್ರಾಚೀನ ಕಾಲದ ಧರ್ಮಗಳನ್ನು ಒಂದಾಗಿಸುವುದಾಗಿರಲಿಲ್ಲ, ಇಲ್ಲವೆ ಹೊಸಧರ್ಮವನ್ನು ಹುಟ್ಟುಹಾಕುವುದಾಗಿರಲಿಲ್ಲ, – ಏಕೆಂದರೆ ಇವುಗಳಲ್ಲಿ ಪ್ರತಿಯೊಂದೂ ಅವರ ಪ್ರಮುಖ ಉದ್ದೇಶದಿಂದ ದೂರ ಕೊಂಡೊಯ್ಯುತ್ತಿತ್ತು. ಅವರ ಯೋಗದ ಒಂದು ಉದ್ದೇಶ ಆಂತರಿಕ ಸ್ವ–ಆಭಿವೃದ್ಧಿ ಮಾಡಿಕೊಳ್ಳುವುದಾಗಿದೆ, ಅದನ್ನನುಸರಿಸುವ ಪ್ರತಿಯೊಬ್ಬನೂ, ಕಾಲಾನುಕ್ರಮದಲ್ಲಿ, ಎಲ್ಲರಲ್ಲಿರುವ ಏಕೈಕನಾದವನನ್ನು ಶೋಧಿಸಬಲ್ಲನು, ಮತ್ತು ಮಾನಸಿಕವಾದುದಕ್ಕಿಂತ ಉಚ್ಚತರ ಪ್ರಜ್ಞೆಯನ್ನು ವಿಕಾಸಗೊಳಿಸಬಲ್ಲನು. ವಿಕಾಸಗೊಂಡ ಆ ಪ್ರಜ್ಞೆ ಮಾನವ ಸ್ವಭಾವವನ್ನು ಪರಿವರ್ತಿಸಬಲ್ಲದು, ದೈವೀಕರಣಗೊಳಿಸಬಲ್ಲದು.

*

ಸಾಧಕರಲ್ಲಿ ಕೆಲವರಿಗೆ ಬರೆದ ಪತ್ರದಲ್ಲಿ ಅದು (ಯೋಗ) ಹೊಸದೆಂದು ಒತ್ತುಕೊಟ್ಟು ಹೇಳಿದ್ದೆ. ನನ್ನ ದೃಷ್ಟಿಯಲ್ಲಿ ಹಳೆಯ ಯೋಗಗಳಿಗಿದ್ದ ಗುರಿಗಳ ಹಾಗೂ ವಿಚಾರಗಳ ಪುನರಾವರ್ತನೆಯಷ್ಟೇ ಸಾಲದು ಎಂಬುದನ್ನು, ಇನ್ನೂ ಸಿದ್ಧಿಸಿಕೊಂಡಿರದ, ಕಣ್ಣಮುಂದೆ ಸ್ಪಷ್ಟವಾಗಿ ತಂದುಕೊಂಡಿರದ ಆದರೆ ಸಿದ್ಧಿಸಿಕೊಳ್ಳಬೇಕಾದ ವಿಷಯವನ್ನು ಮುಂದಿರಿಸುತ್ತಿದ್ದೇನೆ ಎಂಬುದನ್ನು ವಿವರಿಸಿ ಹೇಳಬೇಕಾಗಿತ್ತು, ಆ ವಿಷಯ ಸ್ವಾಭಾವಿಕವಾದದ್ದು, ಆದರೆ ಅದು ಎಲ್ಲ ಗತಕಾಲದ ಆಧ್ಯಾತ್ಮಿಕ ಪ್ರಯತ್ನದ ರಹಸ್ಯ ಫಲಿತಾಂಶ.

ಹಳೆಯ ಯೋಗಗಳಿಗೆ ಹೋಲಿಸಿದರೆ ಅದು ನವೀನ.

1. ಏಕೆಂದರೆ ಅದರ ಗುರಿ ಜಗತ್ತಿನಿಂದ ಹಾಗೂ ಜೀವನದಿಂದ ಸ್ವರ್ಗ ಇಲ್ಲವೆ ನಿರ್ವಾಣದತ್ತ ಪಲಾಯನ ಮಾಡುವುದಲ್ಲ, ಆದರೆ ಜೀವನ ಹಾಗೂ ಅಸ್ತಿತ್ವದ ಬದಲಾವಣೆ ಮಾಡುವುದಾಗಿದೆ, ಅದನ್ನು ಗೌಣವೆಂದಾಗಲಿ, ಪ್ರಾಸಂಗಿಕ ವೆಂದಾಗಲಿ ಪರಿಗಣಿಸುವುದಿಲ್ಲ, ಆದರೆ ಭಿನ್ನವಾದ ಹಾಗೂ ಪ್ರಮುಖ ಉದ್ದೇಶವೆಂದು ಭಾವಿಸುವುದಾಗಿದೆ. ಇತರ ಯೋಗಗಳಲ್ಲಿ ಅವರೋಹಣ ಎಂಬುದಿದ್ದರೆ ಅದು ಕೇವಲ ಮಾರ್ಗದಲ್ಲಿ ಒಂದು ಪ್ರಸಂಗ ಇಲ್ಲವೆ ಆರೋಹಣದ ಪರಿಣಾಮ – ಆರೋಹಣವೇ ನಿಜವಾದ ವಿಷಯ. ಇಲ್ಲಿ

ಆರೋಹಣ ಪ್ರಥಮ ಹೆಜ್ಜೆ, ಆದರೆ ಅದು ಅವರೋಹಣಕ್ಕೆ ಒಂದು ಸಾಧನ, ಆರೋಹಣದಿಂದ ಸಿದ್ಧಿಸಿಕೊಂಡ ಹೊಸ ಪ್ರಜ್ಞೆಯ ಅವರೋಹಣವೇ ಸಾಧನೆಯ ಮೊಹರು ಹಾಗೂ ಮುದ್ರೆ.

2. ಏಕೆಂದರೆ ಅರಸುತ್ತಿರುವ ಗುರಿಯಾದ ವ್ಯಕ್ತಿಗತ ದೈವೀ ಸಿದ್ಧಿ ವ್ಯಕ್ತಿಯ ಸಲುವಾಗಿ ಅಲ್ಲ. ಆದರೆ ಇಲ್ಲಿ, ಪೃಥ್ವಿಯ ಪ್ರಜ್ಞೆಗೆ ಗಳಿಸಬೇಕಾದ ಏನೋ ಒಂದು, ವಿಶ್ವವ್ಯಾಪಿಯಾದದ್ದು, ಕೇವಲ ವಿಶ್ವವನ್ನು ಮೀರಿಹೋದ ಸಿದ್ಧಿಯಲ್ಲ. ಗಳಿಸಬೇಕಾದುದೇನೆಂದರೆ ಪೃಥ್ವಿಯ ಸ್ವಭಾವದಲ್ಲಿ, ಆಧ್ಯಾತ್ಮಿಕ ಜೀವನದಲ್ಲಿಯೂ ಕೂಡ ಇನ್ನೂ ಸಂಘಟಿತವಾಗಿರದ ಇಲ್ಲವೆ ನೇರವಾಗಿ ಕ್ರಿಯಾಶೀಲವಾಗಿರದ ದೈವೀ ಪ್ರಜ್ಞೆಯ ಸಾಮರ್ಥ್ಯ(ಅತಿಮಾನಸ)ವನ್ನು ಕೆಳಗಿಳಿಸಿ ತರುವುದಾಗಿದೆ, ಇನ್ನೂ ಆ ಸಾಮರ್ಥ್ಯವನ್ನು ಸಂಘಟಿಸಿ ಅದು ನೇರವಾಗಿ ಕ್ರಿಯಾಶೀಲವಾಗುವಂತೆ ಮಾಡಬೇಕಾಗಿದೆ.

3. ಈ ಉದ್ದೇಶವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ವಿಧಾನವೊಂದನ್ನು ಬಹಿರಂಗವಾಗಿ ಸಾರಲಾಗಿದೆ, ಅದು ನಾವಿರಿಸಿಕೊಂಡ ಗುರಿಯಷ್ಟೇ ಇಡಿಯಾದದ್ದು ಮತ್ತು ಸಮಗ್ರವಾದದ್ದು, ಎಂದರೆ ಪ್ರಜ್ಞೆಯ ಹಾಗೂ ಸ್ವಭಾವದ ಇಡಿಯಾದ, ಸಮಗ್ರವಾದ ಬದಲಾವಣೆ, ಕ್ರಿಯೆಯ ಒಂದು ಭಾಗವೆಂದು, ಭಿನ್ನವಾದ ಇತರ ಭಾಗಗಳಿಗೆ ಸಹಾಯ ಒದಗಿಸಲೆಂದು ಹಳೆಯ ವಿಧಾನಗಳನ್ನು ಕೈಗೆತ್ತಿಕೊಳ್ಳುವಿಕೆ ಇದೆಲ್ಲ ಇದೆ. ಈ ವಿಧಾನವನ್ನು (ಇಡಿಯಾಗಿ) ಇಲ್ಲವೆ ಇದರಂತಹದನ್ನು ಹಳೆಯ ಯೋಗದಲ್ಲಿ ನಾನು ಕಂಡಿಲ್ಲ, ಅಂತಹದನ್ನು ಕಂಡಿದ್ದರೆ ಹೊಸ ಮಾರ್ಗವನ್ನು ಮಾಡಿಕೊಳ್ಳುವುದಕ್ಕೆ ಅದರ ಶೋಧದಲ್ಲಿ ಹಾಗೂ ಆಂತರಿಕ ಸೃಷ್ಟಿಯಲ್ಲಿ ಮೂವತ್ತು ವರ್ಷಗಳ ಸಮಯವನ್ನು ಹಾಳು ಮಾಡುತ್ತಿರಲಿಲ್ಲ, ಬದಲಾಗಿ ತೀವ್ರಗತಿಯಿಂದ ನಾನು ತಲುಪಬೇಕಾದ ಗುರಿಯಿರುವ ನೆಲೆಯತ್ತ ಸಾಗುತ್ತಿದ್ದೆ, ಅಲ್ಲಿಗೆ ಸಾಗಲು ಸಿದ್ಧಪಡಿಸಿದ ಮಾರ್ಗಗಳು ಮತ್ತು ಅವುಗಳನ್ನು ಕುರಿತು ಪರಿಪೂರ್ಣಗೊಳಿಸಿದ ನಕಾಶ ಇತ್ಯಾದಿಗಳಿರುತ್ತಿದ್ದವು, ಮಾರ್ಗ ಸುರಕ್ಷಿತ ಹಾಗೂ ಸಾರ್ವತ್ರಿಕವಾಗುತ್ತಿತ್ತು. ನಮ್ಮ ಯೋಗ ಹಳೆಯ ಮಾರ್ಗಗಳಲ್ಲಿ ನಡೆದು ಹೋಗುವ ರೀತಿಯದಲ್ಲ, ಅದೊಂದು ಆಧ್ಯಾತ್ಮಿಕ ಸಾಹಸವಾಗಿದೆ.

*

ಕೆಲವೊಂದು ಆಧ್ಯಾತ್ಮಿಕ ಕಲ್ಪನೆಗಳನ್ನು ಮತ್ತು ಸಮಗ್ರ ಯೋಗದ ವಾಸ್ತವ ಸಂಗತಿಗಳನ್ನು ಆಭಿವ್ಯಕ್ತಪಡಿಸಲು ಅತಿಮನಸ್ಸು (Supermind) ಶಬ್ದದ ಹಾಗೆ ಪರಿವರ್ತನೆ (transformation) ಶಬ್ದವನ್ನೂ ನಾನು ಪ್ರಚಲಿತಗೊಳಿಸಿದ್ದೆ. ಜನರು



ಈಗ ಆ ಶಬ್ದವನ್ನು ಕೈಗೆತ್ತಿಕೊಂಡು ನಾನು ಅವುಗಳಲ್ಲಿರಿಸಿದ ಯಾವ ಪ್ರಾಮುಖ್ಯತೆಯೂ ಇಲ್ಲದ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆ. ದಿವ್ಯಾತ್ಮದ 'ಪ್ರಭಾವ'ದಿಂದ ಸ್ವಭಾವವನ್ನು ಶುದ್ಧೀಕರಣಗೊಳಿಸುವುದಕ್ಕೆ ನಾನು ಪರಿವರ್ತನೆ ಎಂಬ ಅರ್ಥ ಕೊಡುತ್ತಿಲ್ಲ, ಶುದ್ಧೀಕರಣ ಚೈತ್ಯಾತ್ಮಿಕ ಬದಲಾವಣೆ ಇಲ್ಲವೆ ಮನಶ್ಶಾಸ್ತ್ರೀಯ ಆಧ್ಯಾತ್ಮಿಕ ಬದಲಾವಣೆಯ ಭಾಗ ಮಾತ್ರ – ಅಲ್ಲದೆ ಆ ಶಬ್ದಕ್ಕೆ ಹಲವಾರು ಅರ್ಥಗಳಿವೆ. ಬಹಳಷ್ಟು ಸಲ ಅದಕ್ಕೆ ನೈತಿಕವೆಂಬ ಅರ್ಥ ಕೊಡಲಾಗುತ್ತದೆ, ಅದು ನನ್ನ ಉದ್ದೇಶಕ್ಕೆ ಪರಕೀಯವಾದದ್ದು. ನನ್ನ ಪ್ರಕಾರ ಆಧ್ಯಾತ್ಮಿಕ ಪರಿವರ್ತನೆಯ ಅರ್ಥ ಕ್ರಿಯಾತ್ಮಕವಾದ ಏನೋ ಒಂದು. ಕೇವಲ ಮೋಕ್ಷ ಪಡೆಯುವುದು, ಇಲ್ಲವೆ ಏಕೈಕನಾದವನನ್ನು ಸಿದ್ಧಿಸಿಕೊಳ್ಳುವುದು ಅಷ್ಟೇ ಅಲ್ಲ, ಅದನ್ನು ಯಾವ ಅವರೋಹಣವಿಲ್ಲದೆ ಸರಿಯಾಗಿಯೇ ಸಿದ್ಧಿಸಿಕೊಳ್ಳಬಹುದು. ಅದು ಆಧ್ಯಾತ್ಮಿಕ ಚಲನಶೀಲ ಹಾಗೆಯೇ ನಿಶ್ಚಲ ಪ್ರಜ್ಞೆಯನ್ನು ಸತ್ತೆಯ ಪ್ರತಿಯೊಂದು ಭಾಗದಲ್ಲಿ, ಅದರ ಅವಚೇತನದ ಭಾಗದಲ್ಲಿಯೂ ಕೂಡ ಇರಿಸುವುದಾಗಿದೆ. ದಿವ್ಯಾತ್ಮನ ಪ್ರಭಾವದಿಂದ ಶುದ್ಧೀಕರಣ, ಮನಸ್ಸು ಮತ್ತು ಹೃದಯದಲ್ಲಿ ಜ್ಞಾನೋದಯ, ಪ್ರಾಣಿಕದಲ್ಲಿ ನಿಶ್ಚಲತೆ ಇದೆಲ್ಲವನ್ನು ಸಿದ್ಧಿಸಿಕೊಂಡು ಪ್ರಜ್ಞೆಯನ್ನು ಅದಿದ್ದ ಹಾಗೆ ಬಿಟ್ಟುಕೊಡುವುದರಿಂದ ಪರಿವರ್ತನೆಯನ್ನು ಪಡೆಯಲಾಗದು. ಪರಿವರ್ತನೆಯ ಅರ್ಥ ಚಲನಶೀಲ ಮತ್ತು ನಿಶ್ಚಲ ದೈವೀ ಪ್ರಜ್ಞೆಯನ್ನು ಈ ಎಲ್ಲ ಭಾಗಗಳಲ್ಲಿ ಕೆಳಗಿಳಿಸಿ ತರುವುದಾಗಿದೆ ಮತ್ತು ಅದನ್ನು ಸದ್ಯ ಪ್ರಜ್ಞೆ ಇರುವ ಸ್ಥಳದಲ್ಲಿ ಇರಿಸುವುದಾಗಿದೆ. ಇದು ಮನಸ್ಸು, ಪ್ರಾಣ ಹಾಗೂ ದೇಹ ಇವುಗಳ ಮೇಲೆ ತೆರೆದಿರಿಸಿಕೊಂಡದ್ದನ್ನು ಹಾಗೂ ಮಿಶ್ರಣರಹಿತವಾದದ್ದನ್ನು ನಾವು ಕಂಡುಕೊಳ್ಳುತ್ತೇವೆ. ಇದು ಕೆಳಗಿಳಿದು ಬರುವುದೆಂಬುದು ಹಲವಾರು ಜನರ ನಿರಾಕರಿಸಲಾಗದ ಅನುಭವದ ವಿಷಯ ಮತ್ತು ನನ್ನ ಅನುಭವದ ಪ್ರಕಾರ ಅದರ ಪೂರ್ತಿ ಅವರೋಹಣವಾದಾಗಷ್ಟೇ ಅದು ಪೂರ್ತಿಯಾಗಿ ಪರದೆಯನ್ನು ಮತ್ತು ಮಿಶ್ರಣವನ್ನು ತೆಗೆದುಹಾಕಬಲ್ಲದು ಹಾಗೂ ಪೂರ್ತಿ ಆಧ್ಯಾತ್ಮಿಕ ಪರಿವರ್ತನೆಯಾಗುವಂತೆ ಪರಿಣಾಮಕಾರಿಯಾಗಬಲ್ಲದು.

– ಶ್ರೀ ಅರವಿಂದರು

*

## ಅತಿಮಾನಸದ ಪ್ರಕಟಣೆ

ಮನುಕುಲವನ್ನು ಮೊದಲು ಸೃಷ್ಟಿಸಿದಾಗ ಅಹಂಕಾರ ಒಟ್ಟುಗೂಡಿಸುವ ಅಂಶವಾಗಿತ್ತು. ಅಹಂಕಾರದ ಸುತ್ತ ಸತ್ತೆಯ ವಿಭಿನ್ನ ಸ್ಥಿತಿಗಳು ಗುಂಪುಗೂಡುತ್ತಿದ್ದವು. ಆದರೆ ಈಗ ಅತಿಮಾನಸ ಮನುಕುಲವನ್ನು ತಯಾರು ಮಾಡಲಾಗುತ್ತಿರುವುದರಿಂದ ಅಹಂಕಾರ ಮಾಯವಾಗಿ ಚೈತ್ಯಸತ್ತೆಗೆ ಸ್ಥಾನ ಮಾಡಿಕೊಡಬೇಕು. ಅದು ದೈವೀ

ಮಧ್ಯಸ್ಥಿಕೆಯಿಂದ ನಿಧಾನಗತಿಯಲ್ಲಿ ರೂಪುಗೊಳ್ಳುತ್ತಿದೆ, ಅದರಿಂದಾಗಿ ಮಾನವ ಸತ್ತೆಯಲ್ಲಿ ಭಗವಂತ ಪ್ರಕಟಗೊಳ್ಳುವಂತಾಗುವುದು.

ಚೈತ್ಯದ ಪ್ರಭಾವದಡಿಯಲ್ಲಿ ಭಗವಂತ ಮನುಷ್ಯನಲ್ಲಿ ಪ್ರಕಟನಾಗುತ್ತಾನೆ ಮತ್ತು ಹೀಗೆ ಅತಿಮಾನವತೆ ಬರುವುದರ ತಯಾರಿ ಮಾಡುತ್ತಾನೆ.

*

ನೀವು ಈ ಕ್ಷಣ ಇಲ್ಲಿದ್ದೀರಿ, ಎಂದರೆ ಪೃಥ್ವಿಯ ಮೇಲಿದ್ದೀರಿ, ಏಕೆಂದರೆ ಇಲ್ಲಿರುವುದನ್ನು ನೀವು ಒಮ್ಮೆ ಆಯ್ಕೆ ಮಾಡಿಕೊಂಡಿದ್ದಿರಿ – ಅದರ ನೆನಪು ನಿಮಗೆ ಈಗ ಬರುತ್ತಿಲ್ಲ, ಆದರೆ ನನಗೆ ತಿಳಿದಿದೆ – ಆ ಕಾರಣದಿಂದಾಗಿ ನೀವು ಇಲ್ಲಿದ್ದೀರಿ. ಸರಿ, ಆ ಕಾರ್ಯದ ಎತ್ತರಕ್ಕೆ ನೀವು ಮೇಲೇರಬೇಕು. ನೀವು ಹೆಣಗಬೇಕು, ಎಲ್ಲ ದೌರ್ಬಲ್ಯಗಳು ಹಾಗೂ ಮಿತಿಗಳ ಮೇಲೆ ಜಯ ಸಾಧಿಸಬೇಕು, ಎಲ್ಲದಕ್ಕಿಂತಲೂ ಹೆಚ್ಚಾಗಿ ನಿಮ್ಮ ಅಹಂಕಾರಕ್ಕೆ "ನಿನ್ನ ಕಾಲ ಮುಗಿಯಿತು" ಎಂದು ಹೇಳಬೇಕು. ಅಹಂಕಾರವಿಲ್ಲದ ಕುಲ ನಮಗೆ ಬೇಕಾಗಿದೆ, ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯಿರುವ ಕುಲ ನಮಗೆ ಬೇಕಾಗಿದೆ. ಮನುಕುಲ ತನ್ನನ್ನು ಅಭಿವೃದ್ಧಿ ಪಡಿಸಿಕೊಳ್ಳುವಂತೆ ಮಾಡುವ ಹಾಗೂ ಅತಿಮಾನಸ ಸತ್ತೆ ಜನ್ಮ ತಾಳುವಂತೆ ಮಾಡುವ ದೈವೀ ಪ್ರಜ್ಞೆ ನಮಗೆ ಬೇಕಾಗಿದೆ.

*

**ಫೆಬ್ರುವರಿ 26, 1956**
**ಬುಧವಾರ ಸಾಮೂಹಿಕ ಧ್ಯಾನ ನಡೆದ ಸಮಯದಲ್ಲಿ**

ಇಂದು ಸಾಯಂಕಾಲ ದೈವೀ ಸಾನ್ನಿಧ್ಯವು ಮೂರ್ತರೂಪದಲ್ಲಿ, ಭೌತಿಕವಾಗಿ ನಿಮ್ಮ ಮಧ್ಯೆ ಒದಗಿ ಬಂದಿತ್ತು. ವಿಶ್ವಕ್ಕಿಂತ ವಿರಾಟದ್ದೆನಿಸುವ ಸ್ವರ್ಣರೂಪವನ್ನು ನಾನು ಧರಿಸಿದ್ದೆ. ಭಗವಂತನನ್ನೂ ಜಗತ್ತನ್ನೂ ಬೇರ್ಪಡಿಸುವ ಬೃಹತ್ ಹಿರಣ್ಮಯ ದ್ವಾರದ ಎದುರಿಗೆ ನಾನು ಮುಖ ಮಾಡಿ ನಿಂತಿದ್ದೆ.

ಆ ದ್ವಾರವನ್ನು ನೋಡುತ್ತಿದ್ದಂತೆ, ಒಂದು ಕ್ಷಣ ದೈವೀ ಪ್ರಜ್ಞೆಯಲ್ಲಿ ನಾನು ಅದರ ರಹಸ್ಯವನ್ನರಿತೆ, "ಮುಹೂರ್ತ ಸನ್ನಿಹಿತವಾಗಿದೆ" ಎಂದು ಸಂಕಲ್ಪ ಮಾಡಿದೆ ಮತ್ತು ನನ್ನ ಎರಡೂ ಕೈಗಳಿಂದ ಬೃಹದಾಕಾರದ ಸುವರ್ಣ ಸುತ್ತಿಗೆಯನ್ನು ಎತ್ತಿಕೊಂಡು ಒಂದು ಏಟು ಕೊಟ್ಟೆ, ಆ ಮಹಾದ್ವಾರಕ್ಕೆ ಒಂದೇ ಒಂದು ಏಟು ಕೊಟ್ಟೆ. ದ್ವಾರ ಒಡೆದು ಚೂರು ಚೂರಾಯಿತು.



ಅನಂತರ ಪೃಥ್ವಿಯ ಮೇಲೆ ಅತಿಮಾನಸ ಪ್ರಕಾಶ, ಶಕ್ತಿ ಮತ್ತು ಪ್ರಜ್ಞೆ ಧಾರಾಕಾರವಾಗಿ ನುಗ್ಗಿ ಬಂದವು.

*

ಪೃಥ್ವಿಯ ವಾತಾವರಣ ಪರಮೋಚ್ಚ ಪ್ರಜ್ಞೆಯ ಘನತೆಗೆ ತೀರಾ ವಿರುದ್ಧವಾದದ್ದಾಗಿದೆ ಮತ್ತು ಅದನ್ನು ಸತತ ಬಹುಮಟ್ಟಿಗೆ ಪರದೆಯ ಹಿಂದಿರಿಸುತ್ತದೆ. ಕಾಲಕಾಲಕ್ಕೆ ಆ ಪ್ರಜ್ಞೆ ತನ್ನನ್ನು ತೋರಿಸಿಕೊಳ್ಳಬಹುದು, ಅಭಿವ್ಯಕ್ತಪಡಿಸಬಹುದು, ಆದರೆ ಮತ್ತೆ ಈ ಅಚೇತನದ ವಾತಾವರಣ ಅದರ ಮೇಲೆ ಪರದೆಯನ್ನಿರಿಸುತ್ತದೆ.

1956ರಲ್ಲಿ ಅತಿಮಾನಸ ಸಾಮರ್ಥ್ಯ ಪೃಥ್ವಿಯ ಮೇಲೆ ಕೆಳಗಿಳಿದು ಬಂದಾಗ ಅದು ಆ ರೀತಿಯದಾಗಿತ್ತು. ದೈವೀ ಪ್ರಕಾಶದ ರಭಸ ಪ್ರವಾಹ ಹರಿದುಬರುತ್ತಿತ್ತು, ಆ ಅದ್ಭುತ ಪ್ರಕಾಶದ ಜೊತೆಗೆ ದೈವೀ ಶಕ್ತಿ ಹಾಗೂ ದೈವೀ ಸಾಮರ್ಥ್ಯಗಳಿದ್ದವು ಮತ್ತು ಪೃಥ್ವಿಯಿಂದ ಆಳವಾದ, ನೀಲಿವರ್ಣದ ಅಚೇತನ ಮೇಲೆದ್ದು ಬಂದು ದೈವಿಕವಾಗಿದ್ದ ಅದನ್ನೆಲ್ಲ ನುಂಗಿ ಹಾಕಿತು. ಕೆಳಗಿಳಿದು ಬರುತ್ತಿದ್ದ ಎಲ್ಲ ದೈವೀ ಶಕ್ತಿಯನ್ನು ನುಂಗಿಹಾಕಲಾಯಿತು ಮತ್ತು ಆ ಅಚೇತನದೊಳಗಿಂದ ಆ ದೈವೀ ಶಕ್ತಿ ತನ್ನ ಮಾರ್ಗವನ್ನು ಅರಸಿಕೊಂಡು ಬರಬೇಕಾಯಿತು. ಹಾಗಾಗಿ ವಿಷಯಗಳು ಇಷ್ಟೊಂದು ಸಮಯವನ್ನು ತೆಗೆದುಕೊಳ್ಳುತ್ತಿವೆ. ಪ್ರತ್ಯುತ್ತರ ನೀಡುವುದರಲ್ಲಿರುವ ಅತಿಯಾದ ಅಪ್ರಜ್ಞೆ ಪೃಥ್ವಿ ಹೀರಿಕೊಂಡಿದ್ದರ ಮೇಲೆ ಪರದೆಯನ್ನಿರಿಸುತ್ತದೆ. ಹಾಗಿರದೆ ಹೋಗಿದ್ದರೆ ದೀರ್ಘಕಾಲದ ಹಿಂದೆ ಸುರಿದುಬಂದ ದೈವೀ ಪ್ರಕಾಶದಿಂದ ವಿಷಯಗಳು ಬದಲಾಗಬೇಕಿತ್ತು.

– ಶ್ರೀಮಾತೆ

**(16/432, 11/307, 13/52, About Savitri, part I, huta, p. 20)**

*

ಜನ್ಮವೆತ್ತಿ ಬಂದು ನಾವು ಕೈಕೊಳ್ಳಬೇಕಾದ ಒಂದು ಕಾರ್ಯದಲಿ,
ಜಗತ್ತನು ಮೃತ್ಯುರಹಿತ ಪ್ರಕಾಶದಲಿ ದೇವನೆತ್ತರಕೆ ಏರಿಸುವುದಿದೆ,
ಪೃಥ್ವಿಯ ಮೇಲಿನ ಲೋಕದಲಿ ದೇವನನು ಕೆಳಗಿಳಿಸಿ ತರುವುದಿದೆ,
ಪೃಥ್ವಿಯ ಜೀವನವನು ದೈವೀ ಜೀವನವನಾಗಿ ಮಾಡಲು ಬಂದಿಹೆವು ನಾವು.

**(Savitri : p. 692)** – ಶ್ರೀ ಅರವಿಂದರು

*

# ಮಾರ್ಚ 29, 1914 ರ ಯುಗ ಪ್ರವರ್ತಕ ಘಟನೆಯ ಶತಾಬ್ದಿಯನ್ನು ಆಚರಿಸುವುದು ಹೇಗೆ?

(29–3–2013 ರಿಂದ 29–3–2015)

## I

ಅತಿಮಾನಸ ಸೃಷ್ಟಿ, ಪೃಥ್ವಿಯ ಮೇಲಿನ ಸೃಷ್ಟಿಯಾಗಬೇಕಾದುದರಿಂದ, ಆಂತರಿಕ ಬದಲಾವಣೆ ಆಗಬೇಕಷ್ಟೇ ಅಲ್ಲ, ಆದರೆ ಅದರ ಭೌತಿಕ ಹಾಗೂ ಬಾಹ್ಯ ಪ್ರಕಟಣೆಯೂ ಆಗಬೇಕು ಮತ್ತು ನಿಖರವಾಗಿ ಅತ್ಯಂತ ಕಠಿಣವಾದ ಕಾರ್ಯದ ಈ ಭಾಗಕ್ಕಾಗಿಯೇ ಸಮರ್ಪಣ ಅತ್ಯಂತ ಆವಶ್ಯಕವಾಗಿರುತ್ತದೆ. ಈ ಕಾರಣಕ್ಕಾಗಿಯೇ ಭೌತದ್ರವ್ಯದಲ್ಲಿ ಅತಿಮಾನಸ ಭಗವಂತನ ಅವರೋಹಣ, ಮತ್ತು ಅದರಲ್ಲಿ ದೈವೀ ಸಾನ್ನಿಧ್ಯ ಹಾಗೂ ದೈವೀ ಸಾಮರ್ಥ್ಯ ಇವುಗಳ ಕಾರ್ಯಗತಿ ಮಾತ್ರ ಭೌತಿಕ ಹಾಗೂ ಬಾಹ್ಯ ಬದಲಾವಣೆ ಸಾಧ್ಯವಾಗುವಂತೆ ಮಾಡುತ್ತವೆ. ಮಾನವ ಸಂಕಲ್ಪದ ಅತ್ಯಂತ ಸಾಮರ್ಥ್ಯಪೂರ್ಣ ಸ್ವ–ದೃಢೀಕರಣ ಮತ್ತು ಪ್ರಯತ್ನ ಅದು ಸಂಭವಿಸುವಂತೆ ಮಾಡಲು ನಿರ್ವೀರ್ಯವಾಗಿವೆ. ಅಹಂಕಾರದಿಂದ ಕೂಡಿದ ಒತ್ತಾಯ ಮತ್ತು ಪ್ರಾಣಿಕ ಬಂಡಾಯ ಉಳಿದುಕೊಂಡಿರುವವರೆಗೆ ಅವು ಅವರೋಹಣಕ್ಕೆ ದುಸ್ತರ ಅಡೆತಡೆಗಳಾಗಿರುತ್ತವೆ. ಕೇವಲ ಚೈತ್ಯಾತ್ಮಿಕ ಅಭೀಪ್ಸೆಯಿಂದ ತುಂಬಿಕೊಂಡ, ಸ್ಥಿರ, ಪರಿಶುದ್ಧ ಮತ್ತು ಸಮರ್ಪಣ ಮಾಡಿಕೊಂಡ ಭೌತಿಕ ಪ್ರಜ್ಞೆ ಅದರ ಕ್ಷೇತ್ರವಾಗಬಹುದು, ಇದು ಮಾತ್ರ ದೈವೀ ಪ್ರಕಾಶ ಮತ್ತು ದೈವೀ ಸಾಮರ್ಥ್ಯ ಇವುಗಳಿಗೆ ಭೌತಿಕ ಸತ್ತೆಯ ಪರಿಣಾಮಕಾರಿ ತೆರೆದಿರಿಸಿಕೊಳ್ಳುವಿಕೆಯನ್ನು ಉಂಟುಮಾಡಬಹುದು ಮತ್ತು ಅತಿಮಾನಸ ಬದಲಾವಣೆ ನಿಜವಾದದ್ದು ಹಾಗೂ ವ್ಯಾವಹಾರಿಕವಾದದ್ದು ಆಗುವಂತೆ ಮಾಡಬಹುದು. ಇದಕ್ಕಾಗಿ ನಾವು ಇಲ್ಲಿ ದೇಹಧಾರಣೆ ಮಾಡಿಕೊಂಡು ಇರುವೆವು ಮತ್ತು ಅದಕ್ಕಾಗಿ ನೀವು ಮತ್ತು ಇತರ ಸಾಧಕರು ನಮ್ಮ ಬಳಿ ಆಶ್ರಮದಲ್ಲಿದ್ದೀರಿ. ಈ ಪ್ರಾಂತದಲ್ಲಿ ಭಗವಂತನೊಡನೆ ನಿಜವಾದ ಸಂಬಂಧ ಪಡೆಯಬೇಕಾದರೆ ಅದನ್ನು ಬಾಹ್ಯ ಕ್ಷೇತ್ರದಲ್ಲಿರುವ ಕ್ಷುದ್ರ ಬೇಡಿಕೆಗಳು, ತೃಪ್ತಿ ಪಡೆಯುವಿಕೆಗಳು ಇಲ್ಲವೆ ಪ್ರಾಣಿಕಕ್ಕೆ ಸಂತೋಷ ನೀಡುವ ಬಾಹ್ಯದಲ್ಲಿ ಹತ್ತಿರವಿರುವಿಕೆ, ಅದರ ಜಂಬ ಇಲ್ಲವೆ ಆಸೆ ಇವುಗಳ ಮೇಲೆ ಒತ್ತಾಯ ತರುವುದರ ಮೂಲಕ ಮಾಡಲಾಗದು. ಅಲ್ಲಿ ನಿಮಗೆ ಸಿದ್ಧಿ ಬೇಕಾಗಿದ್ದರೆ ನಿಮ್ಮ ಭೌತಿಕ ಪ್ರಜ್ಞೆಯಲ್ಲಿ ನಿಜವಾದ ಹತ್ತಿರವಿರುವಿಕೆಯನ್ನು ಎಂದರೆ ಶ್ರೀಮಾತೆಯವರ ಸಾನ್ನಿಧ್ಯದ ಅವರೋಹಣವನ್ನು, ಭೌತಿಕ ಸತ್ತೆ ಹಾಗೂ ಅದರ ಚಟುವಟಿಕೆಗಳಲ್ಲಿ ಅವರ ಸತತವಾಗಿ ಇರುವ ಆಂತರಿಕ ಸ್ಪರ್ಶವನ್ನು, ಎಲ್ಲ ಕಾರ್ಯ, ಯೋಚನೆ ಮತ್ತು ಚಲನೆಗಳ ಹಿಂದೆ ಅವರ ಸಂಕಲ್ಪ ಹಾಗೂ ಜ್ಞಾನವನ್ನು,



ಎಲ್ಲ ಪ್ರಾಣಿಕ ಮತ್ತು ಭೌತಿಕ ಪ್ರತ್ಯೇಕತೆ, ಹಾತೊರೆತ ಹಾಗೂ ಆಸೆಗಳನ್ನು ಹೊಡೆದೋಡಿಸುವ ಸತತ ಉಪಸ್ಥಿತವಿರುವ ದಿವ್ಯಾನಂದವನ್ನು ಅರಸಬೇಕು.

## II

ಕೆಲವು ಕ್ಷಣಗಳಿರುತ್ತವೆ, ಆಗ ಭಗವಂತನ ಚೇತನ ಮನುಷ್ಯರ ಮಧ್ಯದಲ್ಲಿ ಸಂಚರಿಸುತ್ತಿರುತ್ತದೆ ಮತ್ತು ಅವನ ಉಸಿರು ನಮ್ಮ ಸತ್ತೆಯ ಜೀವ ಜಲಗಳ ಮೇಲೆ ವ್ಯಾಪಕವಾಗಿ ಹರಡುತ್ತಿರುತ್ತದೆ. ಇನ್ನು ಬೇರೆ ಕೆಲವು ಕ್ಷಣಗಳಿರುತ್ತವೆ. ಆಗ ಆ ಚೇತನ ಹಿಂದೆ ಸರಿದು ಹೋಗುತ್ತದೆ, ಮನುಷ್ಯರು ತಮ್ಮದೇ ಅಹಂಕಾರದ ಬಲ ಇಲ್ಲವೆ ಅಶಕ್ತತೆಗಳ ಮೂಲಕ ಕಾರ್ಯ ಕೈಕೊಳ್ಳಬೇಕಾಗುತ್ತದೆ. ಮೊದಲಿನ ಅವಧಿಗಳಲ್ಲಿ ಅಲ್ಪ ಪ್ರಯತ್ನವೂ ಕೂಡ ಮಹತ್ತರ ಪರಿಣಾಮಗಳನ್ನುಂಟು ಮಾಡುತ್ತದೆ, ವಿಧಿಯ ರೀತಿಯನ್ನು ಬದಲಿಸುತ್ತದೆ. ಎರಡನೆಯ ಬಗೆಯ ಅವಧಿಗಳಲ್ಲಿ ಚಿಕ್ಕ ಪರಿಣಾಮವನ್ನು ಕಂಡುಕೊಳ್ಳಲು ಬಹಳ ಪ್ರಯತ್ನ ಮಾಡಬೇಕಾಗುತ್ತದೆ. ಎರಡನೆಯ ರೀತಿಯ ಅವಧಿ ಮೊದಲನೆಯ ಪ್ರಕಾರದ್ದನ್ನು ತಯಾರು ಮಾಡುತ್ತದೇನೋ ನಿಜ, ಯಜ್ಞದ ಚಿಕ್ಕ ಪ್ರಮಾಣದ ಹೊಗೆ ಸ್ವರ್ಗದೆಡೆಗೆ ಮೇಲಕ್ಕೇರಿ ಭಗವಂತನ ಐಶ್ವರ್ಯ ಮಳೆಗರೆಯುವಂತೆ ಮಾಡಬಹುದು. ಭಗವಂತನ ಇಂತಹ ಅಲೌಕಿಕ ದೈವೀ ಕ್ಷಣಗಳು ಬಂದಾಗ ನಿದ್ರಿಸುತ್ತಿರುವ ದೇಶಕ್ಕಾಗಲಿ, ಮನುಷ್ಯರಿಗಾಗಲಿ ಸಂತೋಷ ಸಿಗುವುದಿಲ್ಲ, ಏಕೆಂದರೆ ಆ ಕ್ಷಣಗಳನ್ನು ಸ್ವಾಗತಿಸುವುದಕ್ಕಾಗಿ ದೀವಿಗೆ ಬೆಳಗಿಸಿಟ್ಟಿರುವುದಿಲ್ಲ, ಅವುಗಳ ಕರೆಗೆ ಕಿವಿಗಳು ಕಿವುಡಾಗಿರುತ್ತವೆ. ಆದರೆ ಮೂರುಪಟ್ಟು ದುರ್ದೈವಿಗಳಾದ ಜನರೆಂದರೆ ತಾವು ಬಲಶಾಲಿಗಳಾಗಿದ್ದರೂ, ತಯಾರಿ ಮಾಡಿಕೊಂಡಿದ್ದರೂ ಸಹ ಆ ಕ್ಷಣವನ್ನು ಹಾಳುಮಾಡುವವರು ಇಲ್ಲವೆ ದುರುಪಯೋಗಪಡಿಸಿಕೊಳ್ಳುವವರು ಆಗಿರುತ್ತಾರೆ, ಅವರಿಗೆ ಅದು ತುಂಬಿಬರಲಾರದ ನಷ್ಟ ಹಾಗೂ ದೊಡ್ಡ ಪ್ರಮಾಣದ ವಿನಾಶ.

ದೇವ ಮುಹೂರ್ತದಲ್ಲಿ ನಿನ್ನ ಆತ್ಮವನ್ನು ಎಲ್ಲ ಆತ್ಮವಂಚನೆ, ಬೂಟಾಟಿಕೆ, ಮತ್ತು ವ್ಯರ್ಥ ಆತ್ಮಸ್ತುತಿಗಳಿಂದ ಶುದ್ಧಗೊಳಿಸು, ಅದರಿಂದಾಗಿ ದಿವ್ಯಚೇತನವನ್ನು ನೇರವಾಗಿ ದೃಷ್ಟಿಸಿ ನೋಡಬಹುದು ಮತ್ತು ಅದನ್ನು ಕರೆತರುವ ಧ್ವನಿಯನ್ನು ಕೇಳಬಹುದು. ಒಂದು ಕಾಲಕ್ಕೆ ಪ್ರಭುವಿನ ಕಣ್ಣೆದುರು ಸ್ವ–ರಕ್ಷಣೆಯ ಹಾಗೂ ಆದರ್ಶದ ಬೆಳಕಾಗಿದ್ದ ಸ್ವಭಾವದಲ್ಲಿಯ ಎಲ್ಲ ಕಪಟಾಚರಣೆ ಈಗ ನಿನ್ನ ಕವಚದಲ್ಲಿ ಬಿರುಕಿನಂತಾಗಿ ಏಟನ್ನು ಆಹ್ವಾನಿಸುವುದು. ಒಂದು ಕ್ಷಣ ಗೆಲುವು ನಿನ್ನದಾದರೂ ಅದು ನಿನಗೆ ಇನ್ನೂ ಹೆಚ್ಚು ಕೆಟ್ಟದ್ದಾಗಿ ಪರಿಣಮಿಸುವುದು, ಏಕೆಂದರೆ ತಿರುಗೇಟು ನಂತರ ಬಂದು ಗೆಲುವಿನ ಮಧ್ಯದಲ್ಲಿ ನಿನ್ನನ್ನು ಕೆಳಗೆ ಬೀಸಾಡಿಬಿಡುವುದು. ಆದರೆ ಪರಿಶುದ್ಧನಾಗಿದ್ದು ಎಲ್ಲ ಭಯವನ್ನು ತೊರೆದುಬಿಡು, ಏಕೆಂದರೆ ಆ ಮುಹೂರ್ತ ಬಹಳಷ್ಟು ಸಲ ಭಯಾನಕ ಬೆಂಕಿಯಂತೆ ಮತ್ತು ಸುಂಟರಗಾಳಿ, ಚಂಡಮಾರುತಗಳಂತೆ,

ಭಗವಂತನ ಕ್ರೋಧದ ದ್ರಾಕ್ಷಗಾಣದಂತೆ ಇರುತ್ತದೆ. ಆದರೆ ಅದರಲ್ಲಿ ತನ್ನ ಉದ್ದೇಶದ ಸತ್ಯದ ಆಧಾರದ ಮೇಲೆ ಎದ್ದು ನಿಲ್ಲಬಲ್ಲವನು ಬೀಳಬಹುದಾದರೂ ಮತ್ತೆ ಎದ್ದು ನಿಲ್ಲುವನು, ಗಾಳಿ ರೆಕ್ಕೆಗಳ ಮೇಲೆ ಸಾಗಿ ಹೋದಂತೆ ಕಂಡುಬಂದರೂ ಅವನು ತಿರುಗಿ ಬರುವನು. ಲೌಕಿಕ ದೂರದೃಷ್ಟಿಯು ನಿನ್ನ ಕಿವಿಗಳಿಗೆ ಅತಿ ಹತ್ತಿರದಿಂದ ಪಿಸುಗುಟ್ಟದಿರಲಿ, ಏಕೆಂದರೆ ಆ ಮುಹೂರ್ತ ಅನಿರೀಕ್ಷಿತವಾದದ್ದು, ಗಣನೆಗೆ ನಿಲುಕದಂತಹದು ಅದನ್ನು ಅಳತೆ ಮಾಡಲಾಗದು. ಕ್ಷುದ್ರ ಉಪಕರಣಗಳಿಂದ ದೈವೀ ಉಸಿರಿನ ಸಾಮರ್ಥ್ಯವನ್ನು ಅಳೆಯದಿರು, ಆದರೆ ವಿಶ್ವಾಸವಿರಿಸಿ ಮುಂದೆ ಸಾಗು.

ಆದರೆ ಎಲ್ಲಕ್ಕೂ ಮಿಗಿಲಾಗಿ ಆತ್ಮವನ್ನು ಅಹಂಕಾರದ ಕೂಗಾಟದಿಂದ ಸ್ವಲ್ಪಕಾಲ ಮಾತ್ರಕ್ಕಾದರೂ ಮುಕ್ತಗೊಳಿಸು. ಆಗ ಆ ಅಂಧಕಾರದಲ್ಲಿ ನಿನ್ನೆದುರು ಅಗ್ನಿಯೊಂದು ಹೆಜ್ಜೆ ಹಾಕುತ್ತದೆ, ಬಿರುಗಾಳಿ ನಿನ್ನ ಸಹಾಯಕನಾಗುತ್ತದೆ ಮತ್ತು ನಿನ್ನ ಪತಾಕೆ ನೀನು ಗೆದ್ದುಕೊಳ್ಳಬೇಕಾಗಿದ್ದ ಅತ್ಯಂತ ಶ್ರೇಷ್ಠತೆಯ ಉನ್ನತ ಶಿಖರದ ಮೇಲೆ ಹಾರಾಡುತ್ತದೆ.

## III

ಈ ಯೋಗದಲ್ಲಿ ಇಡೀ ತತ್ವ ಮನುಷ್ಯ ತನ್ನನ್ನು ಭಗವಂತನ ಪ್ರಭಾವಕ್ಕೆ ತೆರೆದಿರಿಸಿಕೊಳ್ಳುವುದಾಗಿದೆ. ಅದು ನಿಮ್ಮ ಮೇಲ್ಗಡೆಗಿದೆ ಮತ್ತು ನೀವು ಅದರ ಬಗ್ಗೆ ಒಮ್ಮೆ ಅರಿವುಳ್ಳವರಾದರೆ, ಆಗ ಅದು ನಿಮ್ಮಲ್ಲಿ ಇಳಿದು ಬರುವುದಕ್ಕೆ ಕರೆ ಕೊಡಬೇಕು. ಅದು ಮನಸ್ಸಿನಲ್ಲಿ, ದೇಹದಲ್ಲಿ ದೈವೀ ಶಾಂತಿ, ಪ್ರಕಾಶ, ಕಾರ್ಯಕೈಕೊಳ್ಳುವ ದೈವೀ ಶಕ್ತಿ, ರೂಪಸಹಿತ ಇಲ್ಲವೆ ರೂಪರಹಿತ ದೈವೀ ಸಾನ್ನಿಧ್ಯ, ಆನಂದ ಇವುಗಳ ರೂಪದಲ್ಲಿ ಕೆಳಗಿಳಿದು ಬರುತ್ತದೆ. ಮನುಷ್ಯನಲ್ಲಿ ಈ ಪ್ರಜ್ಞೆ ಬರುವುದಕ್ಕಿಂತ ಮೊದಲು ತೆರೆದಿರಿಸಿಕೊಳ್ಳುವುದರಲ್ಲಿ ನಂಬಿಕೆ ಹೊಂದಿರಬೇಕು, ಅದಕ್ಕಾಗಿ ಅಭೀಪ್ಸೆ ಪಡಬೇಕು. ಅಭೀಪ್ಸೆ, ಕರೆಕೊಡುವಿಕೆ, ಪ್ರಾರ್ಥನೆ ಇವೆಲ್ಲ ಒಂದೇ ವಿಷಯದ ಭಿನ್ನ ರೂಪಗಳು ಮತ್ತು ಪ್ರತಿಯೊಂದೂ ಪರಿಣಾಮಕಾರಿಯಾಗಿರುತ್ತದೆ. ನಿಮ್ಮೆಡೆಗೆ ಬಂದ ರೂಪವನ್ನು ಇಲ್ಲವೆ ಅತ್ಯಂತ ಸುಲಭವಾದದ್ದನ್ನು ನೀವು ಕೈಗೆತ್ತಿಕೊಳ್ಳಬಹುದು. ಇನ್ನೊಂದು ಮಾರ್ಗವೆಂದರೆ ಏಕಾಗ್ರತೆಯಲ್ಲಿರುವುದಾಗಿದೆ. ನಿಮ್ಮ ಪ್ರಜ್ಞೆಯನ್ನು ಹೃದಯದಲ್ಲಿ ಏಕಾಗ್ರಗೊಳಿಸಿರಿ (ಕೆಲವರು ಶಿರದಲ್ಲಿ ಇಲ್ಲವೆ ಶಿರದ ಮೇಲೆ ಅದನ್ನು ಮಾಡುತ್ತಾರೆ) ಮತ್ತು ಶ್ರೀಮಾತೆಯವರನ್ನು ಕುರಿತು ಧ್ಯಾನ ಮಾಡಿರಿ ಮತ್ತು ಅಲ್ಲಿ ಅವರು ಬರಲೆಂದು ಕರೆ ಕೊಡಿರಿ. ಇವುಗಳಲ್ಲಿ ಯಾವುದೊಂದನ್ನು ಇಲ್ಲವೆ ಬೇರೆ, ಬೇರೆ ಸಮಯಗಳಲ್ಲಿ ಎರಡನ್ನೂ ಕೈಕೊಳ್ಳಬಹುದು. ನಿಮಗೆ ಸ್ವಾಭಾವಿಕವಾಗಿ ಬಂದುದನ್ನು ಇಲ್ಲವೆ ಆ ಕ್ಷಣದಲ್ಲಿ ಕೈಕೊಳ್ಳಬೇಕೆಂದು ಪ್ರೇರಣೆ ಪಡೆದುದನ್ನು ಅನುಸರಿಸಿರಿ. ವಿಶೇಷವಾಗಿ ಪ್ರಾರಂಭದಲ್ಲಿ ಅವಶ್ಯವಾದ ಒಂದು ಸಂಗತಿ ಎಂದರೆ ಮನಸ್ಸನ್ನು ಅಚಂಚಲ ವಾಗಿರುವಂತೆ ಇರಿಸುವುದಾಗಿದೆ. ಧ್ಯಾನದ ಸಮಯದಲ್ಲಿ ಸಾಧನೆಗೆ ಪರಕೀಯವಾದ



ಎಲ್ಲ ಯೋಚನೆಗಳನ್ನು ಮತ್ತು ಎಲ್ಲ ಚಲನೆಗಳನ್ನು ಕೈಬಿಡುವುದಾಗಿದೆ.

– ಶ್ರೀ ಅರವಿಂದರು

**ಪ್ರಾರ್ಥನೆ**

ಓಂ ಶ್ರೀ ಅರವಿಂದೋ ಮೀರಾ,

ನನ್ನ ಮನಸ್ಸನ್ನು ನಿಮ್ಮ ದೈವೀ ಪ್ರಕಾಶಕ್ಕೆ, ನನ್ನ ಹೃದಯವನ್ನು ನಿಮ್ಮ ದೈವೀ ಪ್ರೇಮಕ್ಕೆ, ನನ್ನ ಪ್ರಾಣವನ್ನು ನಿಮ್ಮ ದೈವೀ ಸಾಮರ್ಥ್ಯಕ್ಕೆ ತೆರೆದಿರಿಸಿರಿ. ಎಲ್ಲ ವಸ್ತು–ವಿಷಯಗಳಲ್ಲಿ ನಾನು ಭಗವಂತನನ್ನು ಕಾಣುವಂತಾಗಲಿ.

(ಶ್ರೀ ಅರವಿಂದರು ಕೊಟ್ಟ ಒಂದು ಮಂತ್ರ)

– ಶ್ರೀ ಅರವಿಂದರು

*

**ಅನುಬಂಧ:** ಅಮಲ ಕಿರಣ (ಕೆ.ಡಿ. ಸೇಟ್ನಾ) 'ಮದರ ಇಂಡಿಯಾ' ಮಾಸಪತ್ರಿಕೆಯ ನವ್ಹೆಂಬರ 1951ರ ಸಂಚಿಕೆಯಲ್ಲಿ ಬರೆದಿದ್ದ ಸಂಪಾದಕೀಯ

## ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಒಟ್ಟಿಗೆ ಕುಳಿತು ನೀಡಿದ ಕೊನೆಯ ದರ್ಶನ

ನವ್ಹೆಂಬರ 24 ಮತ್ತೆ ಬಂದಿತ್ತು – ಆ ದಿನದಂದು ಶ್ರೀ ಅರವಿಂದರು ಯಾತ್ರಾರ್ಥಿಗಳಾಗಿ ಬರುತ್ತಿದ್ದ ಸಾರ್ವಜನಿಕರ ಎದುರಿಗೆ ಕಾಣಿಸಿಕೊಳ್ಳುತ್ತಿದ್ದರು. ಯಾತ್ರಾರ್ಥಿಗಳು ಅವರ ಎದುರಿಗೆ ಸಾಗಿ ಹೋಗುತ್ತ ಅವರ ಶಾಂತ, ಆದರೆ ಭೇದಿಸಿ ನೋಡುವ ನೋಟದ ಮೂಲಕ ಆಶೀರ್ವಾದವನ್ನು ಸ್ವೀಕರಿಸುತ್ತಿದ್ದರು. ಕಳೆದ ವರ್ಷ ಅವರು ಶ್ರೀಮಾತೆಯವರ ಜೊತೆಗೆ ಕುಳಿತುಕೊಂಡು ಸಶರೀರದಾಗಿ ಕಾಣಿಸಿಕೊಂಡದ್ದು ಕೊನೆಯ ಅವಕಾಶವಾಗಿತ್ತು. ಅನಂತರ ಸಾರ್ವಜನಿಕರು, ಹನ್ನೊಂದು ದಿನಗಳ ನಂತರ, ಅವರು ಜಗತ್ತಿನೆಡೆಗೆ ಕಣ್ಣು ಮುಚ್ಚಿಕೊಂಡು ಘನತೆಯಿಂದ ಮಲಗಿರುವುದನ್ನು ಕಂಡರು, ಆ ಜಗತ್ತಿಗೆ ಅವರು ಹೊಸ ಜೀವನದ ದರ್ಶನವನ್ನು ಕೊಟ್ಟರು, ಅದು ಮಾನವತೆಯ ದೀರ್ಘಕಾಲದ ಅನಿಷ್ಟಗಳ ಮೇಲೆ ಜಯ ಸಾಧಿಸುವಂತಹದು.

ಕೊನೆಯ ಜೀವಂತ ದರ್ಶನ ಎಲ್ಲ ಅನುಯಾಯಿಗಳ ಮನಸ್ಸುಗಳ ಮೇಲೆ ಮರೆತುಹೋಗದ ಹಾಗೆ ಅಚ್ಚೊತ್ತಿದೆ. ಏಕೆಂದರೆ ಅದು ದೈವಾನುಗ್ರಹದ ಸಾರ್ವಭೌಮ ಕ್ರಿಯೆಯಾಗಿತ್ತು. ಶ್ರೀ ಅರವಿಂದರು ಒಮ್ಮೆಲೆ ಉಂಟಾದ ದೈಹಿಕ ಅಸ್ವಸ್ಥತೆಗೆ ಒಳಗಾಗಿದ್ದರೆಂದು ಹಲವಾರು ಜನರು ತಿಳಿದಿದ್ದರು. ಆ ರೋಗ, ಸಹಜವಾಗಿ, ಒಂದು ಸಾಂಕೇತಿಕ ರೂಪದ ವಿಧಾನವಾಗಿತ್ತು. ಅದಕ್ಕೆ ಅವರು ಅನುಮತಿ ನೀಡಿದ್ದರು,

ಆ ಅನುಮತಿ ಭೌತಿಕ ಮನುಷ್ಯನನ್ನು ತಮ್ಮ ಆಳಿಕೆಯಲ್ಲಿ ಹಿಡಿದಿಟ್ಟುಕೊಂಡಿದ್ದ ಸಾಮರ್ಥ್ಯಗಳ ವಿರುದ್ಧ ನಡೆಸಿದ ಆಧ್ಯಾತ್ಮಿಕ ಹೋರಾಟದ ಭಾಗವಾಗಿತ್ತು. ಆದರೆ ಅದು ದೈವೀ ಸಾಮರ್ಥ್ಯವನ್ನು ಪ್ರದರ್ಶಿಸುವಾಗ ತಳೆದ ಅಣಕದ ತೊಂದರೆಯಾಗಿರಲಿಲ್ಲ. ಪೃಥ್ವಿಯ ಮೇಲಿನ ಮನುಷ್ಯನ ಸ್ಥಿತಿಯನ್ನು ಸಂಪೂರ್ಣವಾಗಿ ಪರಿವರ್ತನೆಗೆ ಒಳಪಡಿಸುವುದನ್ನು ಆಧ್ಯಾತ್ಮಿಕ ಪ್ರತಿಭಾಶಾಲಿ ಪಟ್ಟುಹಿಡಿದು ಕೈಕೊಂಡಾಗ, ಅವನು ನಾಟಕೀಯ ಕ್ರಿಯೆಯಲ್ಲಿ ತೊಡಗಿಕೊಳ್ಳುವುದಿಲ್ಲ, ಅತೀವ ಶ್ರದ್ಧೆಯಿಂದ ಮತ್ತು ಮೂರ್ತರೂಪದ ಯಥಾರ್ಥತೆಯಿಂದ ಮಾನಸಿಕ, ಪ್ರಾಣಿಕ, ಭೌತಿಕ ಸಮಸ್ಯೆಗಳ ಇಡೀ ವ್ಯಾಪ್ತಿಯನ್ನು ಕೈಗೆತ್ತಿಕೊಳ್ಳುತ್ತಾನೆ. ಶ್ರೀ ಅರವಿಂದರು ಒಪ್ಪಿಗೆ ನೀಡಿ ವೇದನೆಗೊಳಗಾದ ಮೂತ್ರಪಿಂಡದ ಅಸ್ವಸ್ಥತೆ ನಿಜವಾಗಿಯೂ ತೀಕ್ಷ್ಣವಾಗಿತ್ತು ಮತ್ತು ಅಪಾಯಕಾರಿ ಸಾಧ್ಯತೆಗಳಿಂದ ಕೂಡಿಕೊಂಡಿತ್ತು. ಆ ಸಾಧ್ಯತೆಗಳೊಂದಿಗೆ ವ್ಯವಹರಿಸಲು ಪರಿಪೂರ್ಣ ವಿಶ್ರಾಂತಿಯ ಆವಶ್ಯಕತೆ ಇತ್ತು. ಆದರೆ ಶ್ರೀ ಅರವಿಂದರು ತಮ್ಮ ಅನುಯಾಯಿಗಳ ಆವಶ್ಯಕತೆಗಳಿಗೆ ಉತ್ತರಿಸಲು ಮತ್ತು ಬಾಹ್ಯ ದೃಶ್ಯಗಳ ಹಿಂದೆ ಏನು ಸಂಭವಿಸುತ್ತಿದೆ ಎಂಬುದರ ಅರಿವಿಲ್ಲದ ಜನರ ಮೇಲೆ ಆಕ್ರಮಣ ಮಾಡುವ ಸೋಲಿನ ಮನೋಭಾವವನ್ನು ಚದುರಿಸಲು ಪ್ರತಿಯೊಂದು ದರ್ಶನ ದಿನದಂದು ಕೈಕೊಳ್ಳುತ್ತಿದ್ದ ಹಾಗೆ ಪ್ರಭಾಪೂರ್ಣ ಹಸನ್ಮುಖದಿಂದ ಕುಳಿತಿರುವ ಶ್ರೀಮಾತೆಯವರ ಜೊತೆಗಿದ್ದು ಪ್ರಶಾಂತರಾಗಿದ್ದು ಘನಗಾಂಭೀರ್ಯದಿಂದ ದರ್ಶನ ನೀಡಿದರು.

ತಾವು ಅನುಭವಿಸುತ್ತಿದ್ದ ಗಂಭೀರ ತೊಂದರೆಯ ಬಗ್ಗೆ ಅವರು ಯಾವ ಸುಳಿವನ್ನೂ ಕೊಡುತ್ತಿರಲಿಲ್ಲ. ಆದರೆ ಈ ದಿನದಂದು, ಸಾಮಾನ್ಯವಾಗಿ ದರ್ಶನ ದಿನದಂದು ಇದ್ದಿರದ, ಒಂದು ವ್ಯತ್ಯಾಸವಿತ್ತು. ಕಾಲ ಕಳೆಯುತ್ತಿದ್ದಂತೆ ದರ್ಶನಕ್ಕಾಗಿ ಬಂದ ಜನರು ಬೇಗ ಬೇಗ ಮುಂದೆ ಸಾಗಿ ಹೋಗಬೇಕೆಂಬ ಸೂಚನೆ ಬಂದಿತು. ಗುರುಗಳ ಸಾನ್ನಿಧ್ಯದಲ್ಲಿ ತಡೆದು ನಿಲ್ಲಬಾರದು ಎಂದು ವಿನಂತಿ ಮಾಡಿಕೊಳ್ಳಲಾಗಿತ್ತು. ಅವರ ಎದುರಿನಲ್ಲಿ ತೀವ್ರಗತಿಯಿಂದ ಸಾಗಿ ಹೋಗಬೇಕಾಗಿತ್ತು ಮತ್ತು ಅವರ ಲಕ್ಷ್ಯವನ್ನು ತಮ್ಮೆಡೆಗೆ ಕ್ಷಣ ಮಾತ್ರಕ್ಕೆ ಪಡೆದುಕೊಳ್ಳಬೇಕಾಗಿತ್ತು, ಅದರಿಂದಾಗಿ ಶ್ರೀ ಅರವಿಂದರು ಕುಳಿತುಕೊಂಡಿರುವ ಭಂಗಿಯಲ್ಲಿ ಬಹಳ ಕಾಲ ಕಳೆಯ ದಂತಾಗುತ್ತಿತ್ತು. ಎರಡು, ಮೂರು ಸಲ ದರ್ಶನ ಕೋಣೆಯ ಬಾಗಿಲನ್ನು ಸ್ವಲ್ಪ ಕಾಲ ಮುಚ್ಚಲಾಗಿತ್ತು. ಹಾಗಿದ್ದರೂ ಪ್ರತಿಯೊಬ್ಬ ಅನುಯಾಯಿ ಅವರ ಆಶೀರ್ವಾದ ನೀಡುವ ಕಣ್ಣುಗಳನ್ನು ಭೇಟಿ ಮಾಡುವುದಕ್ಕೆ ಅವಕಾಶ ಕಲ್ಪಿಸುವ ಕಾರ್ಯದಲ್ಲಿ ಚ್ಯುತಿ ಬರದಂತೆ ನೋಡಿಕೊಳ್ಳಲಾಗಿತ್ತು.

ದರ್ಶನಕ್ಕಾಗಿ ಬೇಗ ಹೋದವರು ಅವರೆದುರು ನಿಲ್ಲಲು ರೂಢಿಯಲ್ಲಿದ್ದ ಅವಕಾಶ ದೊರಕಿಸಿದ ಸುದೈವಿಗಳಾಗಿದ್ದರು. ಪ್ರಸ್ತುತ ಲೇಖಕ ಅವರೊಳಗೊಬ್ಬನಾಗುವ ಸುದೈವ ಹೊಂದಿದ್ದಕ್ಕೆ ಅತ್ಯಂತ ಕೃತಜ್ಞನಾಗಿದ್ದಾನೆ. ದರ್ಶನ ದಿನಗಳಲ್ಲಿ ಗಾಢವಾಗಿರುತ್ತಿದ್ದ



ಪವಿತ್ರ ವಾತಾವರಣದಲ್ಲಿ ಉಸಿರಾಡಿಸುತ್ತ ದರ್ಶನಕ್ಕಾಗಿ ಹೋಗುತ್ತಿದ್ದವರ ಸಾಲಿನಲ್ಲಿ ನಿಂತುಕೊಂಡು ಅಟ್ಟದ ಪಾವಟಣಿಗೆಗಳ ಮೇಲೆ ಸಾವಕಾಶವಾಗಿ ಮುಂದೆ ಸಾಗುತ್ತಿದ್ದಂತೆ ಅವನು ಕರೆಯಬಹುದಾದಂತೆ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಪ್ರಕಾಶಮಯ ವಿಶ್ವಂಭರತ್ವದಲ್ಲಿ ಎಲ್ಲವನ್ನು ಅಪ್ಪಿಕೊಳ್ಳುವ ಮಿತಿ ರಹಿತ ಆಧ್ಯಾತ್ಮಿಕ ದೈವೀ ಸತ್ತೆಯ ಸಾಮರ್ಥ್ಯ, ಪ್ರೇಮಗಳಿದ್ದ ಭಾವನೆ ಬರತೊಡಗಿತು. ಆ ವಿಶ್ವಂಭರತ್ವವೇ ಎರಡು ಪ್ರಮುಖ ಕೇಂದ್ರಗಳನ್ನು ಅವರಿಬ್ಬರ ರೂಪದಲ್ಲಿ ಮುಂದಿರಿಸಿತ್ತು. ಆ ವಾತಾವರಣ ಅದೆಷ್ಟು ಗಾಢವಾಗಿತ್ತೆಂದರೆ ಈ ಪ್ರಸಂಗಕ್ಕಿಂತ ಒಂದು ವಾರ ಮೊದಲು ಶ್ರೀ ಅರವಿಂದರ ಗಂಭೀರ ಕಾಯಿಲೆಯ ಬಗ್ಗೆ ಕೇಳಿದ್ದ ಗಾಳಿ ಸುದ್ದಿ ಅವನ ನೆನಪಿಗೆ ಬರಲಿಲ್ಲ. ಅಟ್ಟದ ಮೇಲಿನ ಕೊನೆಯ ಮೆಟ್ಟಿಲನ್ನು ತಲುಪುತ್ತಿದ್ದಂತೆ ದರ್ಶನ ಕೋಣೆಯ ಬಾಹ್ಯ ತುದಿಯಿಂದ ಕಾಲಾತೀತ ಶಿಲ್ಪ ಮೂರ್ತಿಗಳಂತೆ ಆಸೀನರಾಗಿ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಕುಳಿತಿದ್ದನ್ನು ನೋಡಿದನು. ಆ ದಿನವು ಗತಕಾಲದ ಹಲವಾರು ದರ್ಶನ ದಿನಗಳನ್ನು ಕೂಡಿಕೊಂಡಿತು. ಆ ದಿನಗಳಲ್ಲಿ ಅವನು ನಿಂತಿರುತ್ತಿದ್ದ ಇಲ್ಲವೆ ತನ್ನ ಆಧ್ಯಾತ್ಮಿಕ ಮಾತಾಪಿತರ ಮುಂದೆ ಮೊಳಕಾಲೂರಿ ನಮಸ್ಕರಿಸುತ್ತಿದ್ದ. ಆಶ್ರಮವಾಸಿಯಾಗಲು ಇಪ್ಪತ್ತುಮೂರು ವರ್ಷಗಳ ಹಿಂದೆ ಅವನಿಗೆ ಅನುಮತಿ ದೊರೆತಿತ್ತು. ಆಗ ಏಕಾಗ್ರಗೊಂಡ ಸಮೃದ್ಧಿಯಲ್ಲಿ ಆ ಕ್ಷಣದಿಂದ ಹೊಸ ಜನ್ಮ ಕೊಡುತ್ತ ಬಂದಿದ್ದರು. ಅಸಾಧಾರಣವಾದದ್ದು ಸಾಮಾನ್ಯವೆನಿಸುವ ಹಾಗೆ ಆಗುತ್ತ ಬಂದಿದ್ದು ಭಗ್ನಗೊಂಡಿಲ್ಲ ಎಂದು ಇನ್ನೂ ಹೆಚ್ಚಿನ ರೀತಿಯಲ್ಲಿ ಈಗ ಅನುಭವಕ್ಕೆ ಬಂದಿತು.

ಎಂದಿನ ಹಾಗೆ ಬಿಳಿ ಬಣ್ಣದ ತಿಳುವಾದ ಗಡ್ಡ, ಹೆಗಲ ಮೇಲೆ ಇಳಿ ಬಿದ್ದಿರುವ ಬಿಳಿ ನೀಳಗೂದಲು, ತೆಳು ಬಂಗಾರವರ್ಣದ ಮಹಿಮಾನ್ವಿತ ಮುಖಮುದ್ರೆ ಇವುಗಳೊಡನೆ ಕುಳಿತಿದ್ದರು. ಅವರ ಒಂದು ಮೊಣಕೈ ಅವರ ಆಸನದ ಭುಜದ ಮೇಲೆ, ಇನ್ನೊಂದು ಅವರ ತೊಡೆಯ ಮೇಲಿತ್ತು, ಇಡೀ ದೇಹ ಸಾಮರ್ಥ್ಯಪೂರ್ಣ ವಿರಾಮ ಸ್ಥಿತಿಯಲ್ಲಿತ್ತು. ಅವರು ಬಾಹ್ಯದಲ್ಲಿ ಮಾನವತೆಯ ವೈಭವಯುತ ಕ್ಷಿತಿಜಗಳತ್ತ ದೃಷ್ಟಿಹರಿಸುತ್ತ ಕುಳಿತಿದ್ದಾರೇನೋ ಎನ್ನುವಂತಿತ್ತು, ಮಾನವತೆಯೇ ಸ್ವತಃ ಅರವಿಂದೋನಿಯನ್ ಹಿಮಾಲಯದಡಿಯಲ್ಲಿ ಇನ್ನೂ ತಡಕಾಡುತ್ತ ಅಂತಹ ಕ್ಷಿತಿಜಗಳ ದರ್ಶನ ಪಡೆದಿಲ್ಲ. ಅವರು ಅನುದ್ವಿಗ್ನರಾಗಿರುವಂತೆ ಕಂಡು ಬಂದರು, ಅವರು ಹಾಗಿರುವಾಗ ಶ್ರೀಮಾತೆಯವರು, ಎಂದಿನ ಹಾಗೆ, ಕಳೆದು ಹೋಗುತ್ತಿರುವ ಕ್ಷಣದ ಪ್ರತಿಯೊಂದು ಛಾಯೆಯತ್ತ ಕೃಪೆದೋರಿ ಲಕ್ಷ್ಯಗೊಡುತ್ತಿದ್ದರು. ಒಳಗೆ ಬರುತ್ತಿದ್ದ ಜನರು ಶ್ರೀ ಅರವಿಂದರನ್ನು ಇಂತಹ ಅಪರೂಪದ ಸಂದರ್ಭಗಳಲ್ಲಿ ಸಮೀಪಿಸುತ್ತಿದ್ದಾಗ ಒಳಗಾಗಬಹುದಾದ ಯಾವುದೇ ಬಗೆಯ ಬಿಗಿತವನ್ನು ಶ್ರೀಮಾತೆಯವರು ತಮ್ಮ ಮಧುರ ಸಾಮೀಪ್ಯದ ಅಭಿವ್ಯಕ್ತಿಯಿಂದ ತೆಗೆದು ಹಾಕುತ್ತಿದ್ದರು.

ಪ್ರಸ್ತುತ ಲೇಖಕನು ಅವರ ಬಳಿ ಹೋದಾಗ, ಮುಂದೆ ಹದಿನೈದು ದಿನಗಳ ಒಳಗೆ ಸಂಭವಿಸಲಿದ್ದ ವಿಚಿತ್ರ ಘಟನೆಯ ಬಗ್ಗೆ ಯಾವುದೇ ಬಗೆಯ ಕಳವಳವನ್ನುಂಟು ಮಾಡುವಂತೆ ಕಂಡುಬರುವ ಸುಳಿವು ನೀಡುವ ವಿಲಕ್ಷಣವಾದದ್ದೇನೂ ಇರಲಿಲ್ಲ. ಆದರೆ ವಿಲಕ್ಷಣವಾದದ್ದೊಂದು ಆ ಸಂದರ್ಭವನ್ನು ಗುರುತಿಸಿಟ್ಟುಕೊಳ್ಳುವಂತೆ ಮಾಡಿತು. ಅದು ಈ ಕೊನೆಯ ದರ್ಶನದಲ್ಲಿ ವಿಶೇಷ ದಿವ್ಯಾನಂದವನ್ನು ಕೊಡುವಂತಹದಾಗಿತ್ತು. ಶ್ರೀಮಾತೆಯವರು ಶ್ರೀ ಅರವಿಂದರತ್ತ ಹೊರಳಿ ಅವರಿಗೆ ವಂದನೆ ಸಲ್ಲಿಸುತ್ತಿದ್ದವನ ಹೆಸರನ್ನು ಮೆಲ್ಲಗೆ ಹೇಳಿದರು. ಕೂಡಲೆ ಶ್ರೀ ಅರವಿಂದರು ಮುಗುಳ್ನಗಲು ಪ್ರಾರಂಭಿಸಿದರು, ಅದು ಪರಮೋಚ್ಚ ದಯೆಯಿಂದ ಕೂಡಿದ ಮುಗುಳ್ನಗುವಾಗಿತ್ತು. ಅದರ ಅರ್ಥ ಅವರು ದೇಹತ್ಯಾಗ ಮಾಡಿದ ನಂತರ ತಿಳಿದು ಬಂದಿತು. ಹಿಂತಿರುಗಿ ನೋಡಿದಾಗ ಅದು ಅವರ ಪ್ರಿಯ ಹೆಸರಿನಲ್ಲಿ ಲೇಖನಿಯಿಂದ ಕೈಕೊಂಡ ಎಲ್ಲ ಚಿಕ್ಕ ಕಷ್ಟದ ಕೆಲಸಗಳನ್ನು ಕುರಿತು ರಾಜೋಚಿತ ಮೆಚ್ಚಿಗೆಯನ್ನು ಆ ಮುಗುಳ್ನಗು ಹಿಡಿದಿಟ್ಟುಕೊಂಡಿತ್ತೆಂದು ತೋರಿಬಂದಿತು, ಹಾಗೆಯೇ ಸ್ಫೂರ್ತಿಗಾಗಿ ಅವರ ಮೇಲೆ ಬಹುಮಟ್ಟಿಗೆ ಅಸಹಾಯಕನಾಗಿ ಅವಲಂಬಿಸುವ ರೂಢಿಯಿದ್ದವನಿಗೆ ಭವಿಷ್ಯತ್ತಿನಲ್ಲೆಲ್ಲ ಸಹಾಯ ನೀಡುವ ಭರವಸೆಯಿರುವ ವಿಶಾಲ ಉಪಕಾರವನ್ನು ಆ ಮುಗುಳ್ನಗು ಹಿಡಿದಿಟ್ಟುಕೊಂಡಿತ್ತು.

ಆಂತರಿಕ ಸಹಾಯ ಭಾವನೆಗೆ ಬರುವುದು ನಿಂತು ಹೋಗಿಲ್ಲ. ಯಾವಾಗಲೂ ಆಂತರಿಕ ಸ್ಪರ್ಶ ಮೊದಲಿದ್ದ ಹಾಗೆ ತಯಾರಾಗಿರುತ್ತದೆ. ಮನಸ್ಸಿನ ಮೇಲ್ಗಡೆ ಯೋಚನೆಯ ಹಾಗೂ ಶಬ್ದದ ಭಾಂಡಾರ ಆಂತರಿಕವಾಗಿ ಕಾದುಕೊಂಡಿರುವ ಹಾಗೆ ಗ್ರಹಿಕೆಯುಂಟಾಗುತ್ತದೆ. ಅದು ಕೆಳಗಿಳಿದು ಬರಲು ಶ್ರೀ ಅರವಿಂದರ ಪ್ರಭುತ್ವ ಪೂರ್ಣ ಕೈಗಳಲ್ಲಿದ್ದು ಅವರ ಅನುಮತಿಗಾಗಿ ಕಾದುಕೊಂಡಂತಿದೆ. ಹಿಂದಿನ ವರ್ಷಗಳಲ್ಲಿ ಅದಕ್ಕಾಗಿ ಕರೆ ಆಶ್ರಮದಲ್ಲಿಯ ಅವರ ಕೋಣೆಯಲ್ಲಿದ್ದ ಅವರ ದೇಹಧಾರಣೆ ಮಾಡಿದ ದೈವೀ ಪ್ರಕಾಶದತ್ತ ಹೋಗುತ್ತಿತ್ತು. ಆ ಮುಗುಳ್ನಗು ಮೃತ್ಯು ಎಂದು ಕರೆಯಲಾದ ಪರದೆಯ ಹಿಂದೆ ಹೊಳೆಯುತ್ತಿದೆ ಮತ್ತು ಅದೇ ರೀತಿಯಲ್ಲಿ ಶ್ರೀ ಅರವಿಂದರ ಎಲ್ಲ ಸಾಮರ್ಥ್ಯ ಕಾರ್ಯನಿರತವಾಗಿದೆ. ಇವತ್ತಿನ ದರ್ಶನ, ಅವರು ಶ್ರೀಮಾತೆಯವರ ಬಳಿ ಕುಳಿತಾಗ ನೋಡಿದ್ದ ಅವರ ಸಾಮರ್ಥ್ಯದಿಂದ ತುಂಬಿಕೊಂಡಿರುತ್ತದೆ.

ನವ್ಹೆಂಬರ 24 ದಿನಾಂಕವನ್ನು ಸಿದ್ಧಿ ದಿನ ಎಂದು ಕರೆಯುತ್ತಾರೆ. ಏಕೆಂದರೆ ಆ ದಿನದಂದು ಶ್ರೀ ಅರವಿಂದರು ಪಡೆದ ಅನುಭವದಲ್ಲಿ ಅವರ ದರ್ಶನ ಸಂಪೂರ್ಣ ನೆರವೇರಿಕೆ ಕಂಡುಕೊಳ್ಳುವುದು ಎಂಬ ಭರವಸೆ ಇರುವುದನ್ನು ಕಂಡುಕೊಂಡರು. ಅತ್ಯಂತ ದಿಗಿಲು ಹುಟ್ಟಿಸುವ ಅಡೆತಡೆಗಳಿದ್ದಾಗ್ಯೂ ಅವರು ಜೀವಂತವಿದ್ದಾಗ



ಅನುಗ್ರಹಿಸಿದ ಅವರ ಕೊನೆಯ ದರ್ಶನ, ನಿಖರವಾಗಿ, ಈ ದಿನದಂದೇ ಆಗಿತ್ತು. ಈ ಪ್ರಸಂಗದ ಮೂಲಕ, ತದನಂತರದ ತೋರಿಕೆ ಏನೇ ಆಗಿದ್ದರೂ, ತಮ್ಮ ಜೀವನ ವಿಜಯ ಪಡೆಯಿತೆಂದು ಸಾರಿದರು. ಈ ಸಾರಿ ಹೇಳಿರುವಿಕೆ ಶಬ್ದಗಳ ಮೂಲಕ ಆಗಿತ್ತು ಹಾಗೂ ಸುಸ್ಪಷ್ಟವಾಗಿತ್ತು, ಏಕೆಂದರೆ ಅವರ ಬರಹಗಳಿಂದ ಆಯ್ದುಕೊಂಡಿದ್ದ ಮತ್ತು ಅದನ್ನು ಆ ದಿನದ ಸಂದೇಶ ಎಂದು ಪ್ರಕಟಿಸಿದ್ದ ವಾಕ್ಯ ಹೀಗಿತ್ತು: "ಅತಿಮಾನಸ ಒಂದು ಸತ್ಯಸಂಗತಿ, ವಿಷಯಗಳು ಅವಿರುವ ರೀತಿಯಲ್ಲಿ ಅದರ ಆಗಮನ ಅನಿವಾರ್ಯವಾಗಿದೆ."

*

ಸಾಮೂಹಿಕ ಸಿದ್ಧಿಯ ಗಳಿಗೆ ಬೇಗ ಬರಲೆಂದು ತಮ್ಮ ದೇಹದಲ್ಲಿ ಸಿದ್ಧಿ ಪಡೆಯುವುದನ್ನು ತ್ಯಾಗ ಮಾಡುವ ಪರಮೋಚ್ಚ ನಿಸ್ವಾರ್ಥದ ಕ್ರಿಯೆಯೆಂದಾಗಿ ತಮ್ಮ ದೇಹವನ್ನು ತ್ಯಜಿಸಿದ್ದಾರೆ. ಪೃಥ್ವಿ ಹೆಚ್ಚು ಸ್ಪಂದನಶೀಲವಾಗಿದ್ದರೆ, ನಿಶ್ಚಿತವಾಗಿ, ಈ ತ್ಯಾಗದ ಆವಶ್ಯಕತೆ ಇರುತ್ತಿರಲಿಲ್ಲ.

**(13/9)** – ಶ್ರೀಮಾತೆ

| **ಒಪ್ಪೋಲೆ :<br>ಅಖಿಲ ಭಾರತ ಪತ್ರಿಕೆ, ಜನವರಿ, 2013** | | |
|---|---|---|
| **ಪುಟ ಮತ್ತು ಸಾಲು** | **ತಪ್ಪು** | **ಒಪ್ಪು** |
| 43, ಸಾಲು 8 | ಈಶಾವಾಶ್ಯೋಪನಿಷತ್ | ಈಶಾವಾಸ್ಯೋಪನಿಷತ್ |
| 56, ಸಾಲು 11 | ನಿಷ್ಕಾಪಟ್ಟದಿಂದ | ನಿಷ್ಕಾಪಟ್ಯದಿಂದ |

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

26 ನೇ ಜನವರಿ 2013 ರ ಶನಿವಾರದಂದು ಹಾಗೂ 27 ನೇ ಜನವರಿ 2013 ರ ಭಾನುವಾರದಂದು 1) "Sri Aurobindo's Savitri" – A Legend and a Symbol, 2) "Savitri" - It's Profound and Magnificent Significance ಮತ್ತು 3) "The Hour of God" ಎಂಬ ವಿಷಯಗಳ ಬಗ್ಗೆ ಡಾ. ಅಲೋಕ್ ಪಾಂಡೆ, ಶ್ರೀ ಅರವಿಂದ ಆಶ್ರಮ, ಪುದುಚೇರಿ ಇವರಿಂದ

ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು, ಇತರರು ಉಪಸ್ಥಿತರಿದ್ದರು.

9 ನೇ ಫೆಬ್ರವರಿ 2013 ರ ಶನಿವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲಾವತಿಯಿಂದ ಜ್ಯೋತಿ ಪ್ರಸರಣ ಕಾರ್ಯಕ್ರಮ ಜರುಗಿತು. ಮುಖ್ಯ ಅತಿಥಿಗಳು ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶಿಕ್ಷಕ ವೃಂದ ಹಚ್ಚಿದ ಜ್ಯೋತಿ ಹತ್ತನೆಯ ತರಗತಿಯ ವಿದ್ಯಾರ್ಥಿಗಳ ಮೂಲಕ ಒಂಬತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಪ್ರಸಾರವಾಯಿತು. ವಿದ್ಯಾರ್ಥಿಗಳು ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸರಿಂದ ಪ್ರತಿಜ್ಞಾ ಸ್ವೀಕಾರ ಮಾಡಿದರು. ಮುಖ್ಯ ಅತಿಥಿಗಳಾದ ಡಾ. ಅನುರಾಧ ಚೌಧುರಿಯವರು ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದರು. ಶಾಲಾ ಪ್ರಾಂಶುಪಾಲರು ಉಪಸ್ಥಿತರಿದ್ದರು. ಹತ್ತನೆಯ ತರಗತಿಯ ವಿದ್ಯಾರ್ಥಿಗಳು ತಮ್ಮ ಶಾಲಾ ಅನುಭವಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ಪೋಷಕರು ಮತ್ತು ಶಾಲಾ ಶಿಕ್ಷಕ ವೃಂದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ತತ್ಸಂಬಂಧ ಅದೇ ದಿನ ಸಾಯಂಕಾಲ 4.30 ರಿಂದ 6 ಗಂಟೆಯವರೆಗೆ "Mantric Power of Sanskrit Sound/Words" ಎಂಬ ವಿಷಯದ ಬಗ್ಗೆ ಡಾ. ಅನುರಾಧ ಚೌಧುರಿ, ಪುದುಚೇರಿ ಇವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಇದಕ್ಕೆ ಅನೇಕ ಗುರುಬಂಧುಗಳು, ಇತರರು ಉಪಸ್ಥಿತರಿದ್ದರು.

ದಿನಾಂಕ 21 ನೇ ಫೆಬ್ರವರಿ 2013 ರ ಗುರುವಾರದಂದು ಶ್ರೀಮಾತೆಯವರ ಜನ್ಮ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7 ರಿಂದ 7.30 ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಸಾಯಂಕಾಲ 4.30 ರಿಂದ 5.30 ರ ವರೆಗೆ ಶ್ರೀಯುತ ಭಾಸ್ಕರ ರೆಡ್ಡಿಯವರು "Man's last Spiritual Frontier" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 21 ನೇ ಫೆಬ್ರವರಿ 2013 ರಿಂದ ದಿನಾಂಕ 28 ನೇ ಫೆಬ್ರವರಿ 2013 ರ ವರೆಗೂ "The Mother's Symbol" "The Symbolism of Colours" by Sri Aurobindo & The Mother ಎಂಬ ವಿಷಯದ ಬಗ್ಗೆ ವರ್ಣಚಿತ್ರ ಪ್ರದರ್ಶನವನ್ನು ಆಯೋಜಿಸಲಾಗಿತ್ತು.



ಅಖಿಲ ಭಾರತ ಪತ್ರಿಕೆಗೆ ಸಂಬಂಧಿಸಿದಂತೆ ಮಾಲೀಕತ್ವ ಮತ್ತು ಇತರೆ ವಿವರಗಳ ತಖ್ತೆ:

**ನಮೂನೆ – 4**

(1) **ಪ್ರಕಟಣೆ ಸ್ಥಳ** : ನಂ. 39 ಮತ್ತು 38 (ಪಿ.), 30ನೇ ಮೂಖ್ಯರಸ್ತೆ, 9ನೇ ಅಡ್ಡರಸ್ತೆ, ಶ್ರೀ ಅರವಿಂದೋ ಮಾರ್ಗ, ಜೆ.ಪಿ. ನಗರ, ಒಂದನೇ ಹಂತ, ಬೆಂಗಳೂರು – 560 078. (2) **ಆವರ್ತನದ ಪ್ರಕಟಣೆ** : ಮಾಸಿಕ (3) **ಮುದ್ರಕರ ಹೆಸರು, ರಾಷ್ಟ್ರೀಯತೆ ಮತ್ತು ವಿಳಾಸ** : ಅಜಿತ್ ಸಬ್ನೀಸ್, ಭಾರತೀಯ, ನಂ. 39 ಮತ್ತು 38 (ಪಿ), 30ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶ್ರೀ ಅರವಿಂದೋ ಮಾರ್ಗ, ಜೆ.ಪಿ. ನಗರ, ಒಂದನೇ ಹಂತ, ಬೆಂಗಳೂರು – 560 078. (4) **ಪ್ರಕಾಶಕರ ಹೆಸರು, ರಾಷ್ಟ್ರೀಯತೆ ಮತ್ತು ವಿಳಾಸ** : ಅಜಿತ್ ಸಬ್ನೀಸ್, ಭಾರತೀಯ, ನಂ. 39 ಮತ್ತು 38 (ಪಿ), 30ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶ್ರೀ ಅರವಿಂದೋ ಮಾರ್ಗ, ಜೆ.ಪಿ. ನಗರ, ಒಂದನೇ ಹಂತ, ಬೆಂಗಳೂರು – 560 078. (5) **ಸಂಪಾದಕರ ಹೆಸರು, ರಾಷ್ಟ್ರೀಯತೆ ಮತ್ತು ವಿಳಾಸ** : ಡಾ. ಕೆ.ಎಸ್. ಆಮೂರ, ಭಾರತೀಯ, ನಂ. 39 ಮತ್ತು 38 (ಪಿ), 30ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶ್ರೀ ಅರವಿಂದೋ ಮಾರ್ಗ, ಜೆ.ಪಿ. ನಗರ, ಒಂದನೇ ಹಂತ, ಬೆಂಗಳೂರು – 560 078. (6) **ವೃತ್ತ ಪತ್ರಿಕೆ ಮಾಲೀಕರುಗಳ ಹೆಸರು, ವಿಳಾಸ ಮತ್ತು ಪಾಲುದಾರಿಕೆ ಅಥವಾ ಷೇರುದಾರರ ಹಿಡುವಳಿ ಶೇಕಡ ಒಂದಕ್ಕಿಂತ ಒಟ್ಟು ಬಂಡವಾಳದಲ್ಲಿ ಅಧಿಕವಾಗಿದ್ದಲ್ಲಿ** : ಶ್ರೀ ಅರವಿಂದೋ ಸೊಸೈಟಿ, ಸೊಸೈಟಿ ಹೌಸ್, ನಂ. 11, ಸೆಂಟ್ ಮಾರ್ಟಿನ್ ಸ್ಟ್ರೀಟ್, ಪುದುಚೇರಿ – 605 001.

ಅಜಿತ್ ಸಬ್ನೀಸ್ ಆದ ನಾನು ಈ ಮೂಲಕ ಮೇಲ್ಕಂಡ ವಿವರಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

28 ಫೆಬ್ರವರಿ 2013

ಅಜಿತ್ ಸಬ್ನಿಸ್
ಪ್ರಕಾಶಕರು



*"In the silence of the heart, you will receive the command."*

- The Mother

**RNI No. 22511/1971**
No. of Pages **40 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.